ವಿರೋಧ ಪಕ್ಷಗಳ ಐಕ್ಯತೆ?

ರಾಜ್ಯದಲ್ಲಿ ಜನತೆಯ ಅತೃಪ್ತಿ ಕಟ್ಟೆಯೊಡೆದು ಹೊರಬಂದಿದೆ. ರೈತರ ಚಳುವಳಿ ಮತ್ತು ಬೆಲೆಏರಿಕೆ ಹಾಗೂ ಪೋಲೀಸ್ ದೌರ್ಜನ್ಯದ ವಿರುದ್ಧ ರಾಜ್ಯಾದ್ಯಂತ ನಡೆಯುತ್ತಿರುವ ಚಳುವಳಿಗಳು ಕಾಂಗ್ರೆಸ್ ಸರಕಾರವನ್ನು ತತ್ತರಿಸುವಂತೆ ಮಾಡಿದೆ, ಸರಕಾರದ ಪೊಳ್ಳು ಭರವಸೆಗಳು ಮತ್ತು ಜನತಾವಿರೋಧಿ ಧೋರಣೆಗಳು ಜನರಿಗೆ ಅರ್ಥವಾಗತೊಡಗಿದೆ. ಇದರೊಂದಿಗೆ ಜನರ ಪ್ರತಿನಿಧಿಗಳೆನಿಸಿಕೊಂಡು, ಜನತೆಯಿಂದ ಚುನಾಯಿತರಾಗಿ ವಿಧಾನಸೌಧಕ್ಕೆ ತೆರಳಿದ ಶಾಸಕರುಗಳ ಅಸಫಲತೆಯೂ ಜನರಿಗೆ ತಿಳಿಯುವಂತಾಗಿದೆ. ಮಲಪ್ರಭಾ ರೈತರು ಕಳೆದ ಎರಡು ವರ್ಷಗಳಿಂದ ಹೋರಾಡುತ್ತ ಬಂದಿರುವರಾದರೂ, ಸಹಸ್ರಾರು ರೈತರು ಅನ್ನಸತ್ಯಾಗ್ರಹದಲ್ಲಿ ಭಾಗವಹಿಸಿದ್ದರೂ, ರಾಜ್ಯದಾದ್ಯಂತ ಬೆಲೆಏರಿಕೆಯಿಂದ ಜನ ತತ್ತರಿಸುತ್ತಲಿದ್ದರೂ, ಶಾಸಕರುಗಳಿಗೂ, ಮಂತ್ರಿಗಳಿಗೂ ಈ ಬಗ್ಗೆ ಗಮನವೇ ಇದ್ದಿಲ್ಲ.

ಪೋಲೀಸ್ ಗೋಲೀಬಾರಿನಿಂದ ಸಾವುನೋವುಗಳಾಗುವಾಗಲೇ ಶಾಸಕರುಗಳಿಗೂ, ಮಂತ್ರಿಗಳಿಗೂ ಎಚ್ಚರವಾದುದು; ಹೋರಾಟ ಮತ್ತು

ಸಂಪಾದಕೀಯ

ಸಮಸ್ಯೆಗಳಿಗೆ ಪ್ರಚಾರವೂ ಆಗಲೇ ಬಂದುದು. ರೈತರ ಹೋರಾಟವನ್ನು ಬಲಾತ್ಕಾರದಿಂದ ದಮನಗೊಳಿಸಲು ಸಾಧ್ಯವಾಗದ ಸರಕಾರವು, ರೈತರ ಬೇಡಿಕೆಗಳ ಬಗ್ಗೆ ಕೆಲವು ರಿಯಾಯ್ತಿಗಳನ್ನು ಘೋಷಿಸಿ ಚಳುವಳಿಯನ್ನು ನಿಲ್ಲಿಸಲು ಪ್ರಯತ್ನಿಸಿತು. ಸರಕಾರವು ಕೆಲವು ರಿಯಾಯ್ತಿಗಳನ್ನು ಘೋಷಿಸಿದೊಡನೆಯೇ ಹೆಚ್ಚಿನ ವಿರೋಧ ಪಕ್ಷಗಳೆಲ್ಲವೂ ಸರಕಾರವನ್ನು ಕೊಂಡಾಡಿದುವು; ಸರಕಾರಕ್ಕೆ ಬೆಂಬಲ ಸಾರಿ, ರೈತರು ಚಳುವಳಿಯನ್ನು ನಿಲ್ಲಿಸಲೂ ಕರೆ ಇತ್ತರು, ಇಷ್ಟೇ ಸಾಲದೆಂಬಂತೆ ಇಂದಿರಾ ಕಾಂಗ್ರೆಸ್ಸಿನ ಕಟ್ಟಾ ವಿರೋಧಿಗಳೆನಿಸಿಕೊಂಡಿದ್ದ ಕೆಲವು ಶಾಸಕ ಪ್ರಮುಖರು ಆಳುವ ಪಕ್ಷಕ್ಕೆ ಸೇರಿಕೊಂಡರು.

ರಾಜ್ಯದಲ್ಲಿ ಜನತೆಯ ಅತೃಪ್ತಿ ಭುಗಿಲೆದ್ದು, ಬಂಡವಾಳಶಾಹಿ-ಭೂಮಾಲಕರ ಸರಕಾರವು ಅಲ್ಲಾಡತೊಡಗಿದಾಗ, ಅದನ್ನು ಉಳಿಸಲು ಇದೇ ವರ್ಗದ ಹಿತಗಳನ್ನು ರಕ್ಷಿಸುವ ಕೆಲವು ವಿರೋಧ ಪಕ್ಷಗಳವರು ಸರಕಾರಕ್ಕೆ ಬೆಂಬಲವಿತ್ತದ್ದು ಮಾತ್ರವಲ್ಲ, ಆಳುವಪಕ್ಷವನ್ನು ಸೇರಿದರು.

(ಕಡೇ ಪುಟ ನೋಡಿ)

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 33 | ಆಗಸ್ಟ್ 17, 1980 | ಬೆಲೆ : 50 ಪೈಸೆ

ಪ್ರಜಾಪ್ರಭುತ್ವ ಹೋರಾಟಕ್ಕೆ ಮುನ್ನುಗ್ಗಲು ರೈತರಿಗೆ ಕರೆ

ಕಳೆದ ಒಂದು ವರ್ಷದಲ್ಲಿ ದೇಶ-ವಿದೇಶಗಳಲ್ಲಿ ಹಲವು ಪ್ರಮುಖ ಘಟನೆಗಳು ನಡೆದಿವೆ. ಈ ಘಟನೆಗಳನ್ನು ವಿಶ್ಲೇಷಿಸುವುದು ರೈತ ಸಂಘದ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸುವುದಕ್ಕೆ ತುಂಬಾ ಸಹಾಯಕವಾಗುವುದು ಎಂಬುದರಲ್ಲಿ ಏನೂ ಸಂಶಯ ಎಲ್ಲ.

ಅಫಘಾನಿಸ್ತಾನದಲ್ಲಿ ಏಪ್ರಿಲ್ 1978ರಲ್ಲಿ ಜನತಾ ಪ್ರಜಾಸತ್ತಾತ್ಮಕ ಪಕ್ಷವು ಸೈನ್ಯದ ಒಂದು ವಿಭಾಗದ ಸಹಾಯದಿಂದ ಅಧಿಕಾರಕ್ಕೆ ಬಂದು ಪ್ರಪ್ರಥಮ ಆ ರಾಜ್ಯದಲ್ಲಿ ನಿಜವಾದ ಭೂ-ಸುಧಾರಣೆಗಳನ್ನು ಜಾರಿಗೆ ತಂದರೂ, ತತ್‌ಪರಿಣಾಮವಾಗಿ ಸಾವಿರಾರು ವರ್ಷಗಳಿಂದ ಅಫಘಾನಿಸ್ತಾನದ ಜನತೆಯನ್ನು ಅತ್ಯಂತ ಕೀಳು ಮಟ್ಟದ ಜೀವನಕ್ಕೆ ಗುರಿಪಡಿಸಿದ ಭೂಸ್ವಾಮ್ಯ ಪದ್ಧತಿಯು ನಾಶಗೊಂಡಿತು. ಅದರಿಂದ ಕುಪಿತಗೊಂಡ ಪಾಳೆಯಗಾರಿ ಸ್ಥಾಪಿತಹಿತಾಸಕ್ತಿಗಳು ಜಾತೀಯತೆಯನ್ನು ಕೆರಳಿಸಲು ಪ್ರಯತ್ನಿಸಿತು, ನಿರಕ್ಷರತೆಯನ್ನು ಸಾರ್ವತ್ರಿಕ ಹೋಗಲಾಡಿಸಲು ಕ್ರಾಂತಿಕಾರಿ ಸರಕಾರವು ಕೈಗೊಂಡ ಕ್ರಮಗಳನ್ನು ಕೆಲವು ಮುಸ್ಲಿಂ ಧರ್ಮಾಧಿಕಾರಿಗಳು ಜನತೆಯ ಮೇಲಿನ ತಮ್ಮ ಅಂಧಾಧಿಕಾರ ತಪ್ಪುವುದೆಂದು ಎದುರಿಸಲಾರಂಭಿಸಿದರು. ಸಾಮ್ರಾಜ್ಯಶಾಹಿಗಳು ಈ ಸನ್ನಿವೇಶವನ್ನು ಉಪಯೋಗಿಸಿ ಸೌದಿಅರೇಬಿಯಾ, ಪಾಕಿಸ್ತಾನಗಳನ್ನು ಪ್ರಚೋದಿಸಿ ಅಫಘಾನಿಸ್ತಾನದೊಳಗೆ ಲಕ್ಷಾಂತರ 'ಪ್ರತಿಕ್ರಾಂತಿ ಧಾಳಿಕೋರರನ್ನು' ಕಳುಹಿಸಿ ಸರಕಾರವನ್ನು ಉರುಳಿಸಿ ಹಂಚಿಕೆ ಹಾಕಿದವು. ಬೇರೇನೂ ಉಪಾಯವಿಲ್ಲದೆ, ಅಫಘಾನಿಸ್ತಾನದ ಕ್ರಾಂತಿಕಾರಿ ಸರಕಾರವು ರಷ್ಯಾದ ಸೈನ್ಯವನ್ನು ಆಮಂತ್ರಿಸಿ ಈ ವಿದೇಶಿ-ಸಾಮ್ರಾಜ್ಯಶಾಹಿ ಪ್ರೇರಿತ ದಂಗೆಕೋರರಿಂದ ಗಡಿರಕ್ಷಣೆಮಾಡಲು ದೃಢವಾದ ಕ್ರಮ ವಹಿಸಿತು, ರಷ್ಯಾವು ಸೈನ್ಯಗಳನ್ನು ಕಳುಹಿಸಿ ಕ್ರಾಂತಿಕಾರಿ ಸರಕಾರದ ಭದ್ರತೆಗೆ ಸಹಾಯ ಮಾಡಿತು. ಈ ಘಟನೆ ಜಾಗತಿಕ ಸಾಮ್ರಾಜ್ಯಶಾಹಿ ಶಕ್ತಿಗಳೂ, ಪ್ರತಿಗಾಮಿ ಶಕ್ತಿಗಳೂ ಒಂದೆಡೆ ಪ್ರಗತಿಪರ ಬೆಳವಣಿಗೆಯನ್ನು ಯಾವುದೇ ದೇಶದಲ್ಲಿ ಹೇಗೆ ಮುರಿದುಹಾಕಲು ಪ್ರಯತ್ನಿಸುತ್ತವೆ ಎಂಬುದನ್ನೂ, ಆದರೆ ಇಂದು ಜಗತ್ತಿನಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳೂ ಸಮಾಜವಾದಿ ಶಕ್ತಿಗಳೂ ಜತೆಗೂಡಿ ಹೋರಾಟ

(ಕಡೆಯ ಪುಟ ನೋಡಿ)

ಮಲಪ್ರಭಾ ರೈತ ಚಳುವಳಿಗೆ ಸೌಹಾರ್ದ ಕಾರ್ಯಕ್ರಮ

ರೈತ, ಕೃಷಿಕೂಲಿಗಾರರ ಸಮಸ್ಯೆಗಳ ಬಗ್ಗೆ ರಾಜ್ಯದಾದ್ಯಂತ ಹೋರಾಟ

ಮಲಪ್ರಭಾ ನೀರಾವರಿ ಪ್ರದೇಶದ ರೈತ ಚಳುವಳಿ ಮತ್ತು ಇದಕ್ಕೆ ಬೆಂಬಲವಾಗಿಯೂ, ಪೋಲೀಸ್ ದೌರ್ಜನ್ಯವನ್ನು ಖಂಡಿಸಿ ಮತ್ತು ಬೆಲೆಏರಿಕೆ ವಿರುದ್ಧ ರಾಜ್ಯದಾದ್ಯಂತ ಬೆಳೆದುಬಂದ ಚಳುವಳಿಯನ್ನು ಸುದೀರ್ಘವಾಗಿ ವಿಮರ್ಶಿಸಿದ ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯ ಮಂಡಲಿಯು ಉತ್ತರ ಕರ್ನಾಟಕದ ರೈತರು ಚಾರಿತ್ರಿಕ ಹೋರಾಟ ನಡೆಸಿರುವುದಕ್ಕೆ ಅವರನ್ನು ಅಭಿನಂದಿಸಿದೆ. ರೈತಚಳುವಳಿಯಲ್ಲಿ ಮತ್ತು ಇದಕ್ಕೆ ಬೆಂಬಲವಾಗಿ ಹಾಗೂ ಬೆಲೆಏರಿಕೆ ವಿರುದ್ಧದ ಹೋರಾಟದಲ್ಲಿ ಕೋಲಾರ ಜಿಲ್ಲೆಯ ಬಾಗೇಪಲ್ಲಿಯೂ ಸೇರಿದಂತೆ ಪೋಲೀಸ್ ಗೋಲಿಬಾರಿನಿಂದ ಮೃತಪಟ್ಟವರ ಬಗ್ಗೆ ಆಗಸ್ಟ್ 12, 13, ಮತ್ತು 14ರಂದು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಸೇರಿದ್ದ ರೈತಸಂಘದ ರಾಜ್ಯಮಂಡಲಿಯು ಸಂತಾಪವನ್ನು ಸೂಚಿಸಿದೆ. ಮೃತಪಟ್ಟವರ ಕುಟುಂಬಕ್ಕೆ ಸಹಾಯ ನೀಡಲು ಮತ್ತು ಹೋರಾಟವನ್ನು ಬೆಂಬಲಿಸಲು ರಾಜ್ಯದಾದ್ಯಂತ ನಿಧಿ ಸಂಗ್ರಹಮಾಡಲು ರಾಜ್ಯಮಂಡಲಿಯು ನಿರ್ಣಯಿಸಿದೆ. ಒಂದು ರೂಪಾಯಿಯ ಕೂಪನ್ನುಗಳ ಮೂಲಕ ಈ ನಿಧಿಯನ್ನು ಆಗಸ್ಟ್ ತಿಂಗಳೊಳಗಾಗಿ ಸಂಗ್ರಹಿಸಿ, ರಾಜ್ಯಸಮಿತಿ ಕಛೇರಿಗೆ ಕಳುಹಿಸಿಕೊಡಲು ಸಭೆಯು ಕರೆ ಇತ್ತಿದೆ. ಹಾಗೆಯೇ ಗೋಲಿಬಾರಿನಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ರೂ. 25000 ದಷ್ಟು ಪರಿಹಾರ ಕೊಡಬೇಕೆಂದು ಸರಕಾರವನ್ನು ರಾಜ್ಯಮಂಡಲಿಯು ಒತ್ತಾಯಿಸಿದೆ.

ಮಲಪ್ರಭಾ ರೈತರು 23 ಬೇಡಿಕೆಗಳನ್ನಿಟ್ಟಿದ್ದು, ಸರಕಾರವು ಜನತೆಯ ಒತ್ತಾಯಕ್ಕೆ ಮಣಿದು ಕೆಲವು ಬೇಡಿಕೆಗಳನ್ನು ಮನ್ನಿಸಿದರೂ, ಬಹಳಷ್ಟು ಬೇಡಿಕೆಗಳು ಇನ್ನೂ ಈಡೇರಿಲ್ಲ. ಬಂಧಿತರಾದವರ ನಿಶ್ಶರ್ತ ಬಿಡುಗಡೆಯಾಗಿಲ್ಲ. ಅವರ ಮೇಲಿನ ಮೊಕದ್ದಮೆಗಳನ್ನು ಹಿಂತೆಗೆದುಕೊಂಡಿಲ್ಲ. ಮಲಪ್ರಭಾ ರೈತ ಸಮನ್ವಯ ಸಮಿತಿಯ ಸಂಚಾಲಕರಲ್ಲೊಬ್ಬರಾದ ಕಾಂ. ವಿ. ಎನ್. ಹಳಕಟ್ಟಿ ಅವರಿಂದ ವಿವರವಾದ ವರದಿ ಪಡೆದ ಮೇಲೆ, ಚರ್ಚೆ ನಡೆಸಿದ ರಾಜ್ಯಮಂಡಲಿಯು ಮಲಪ್ರಭಾ ರೈತರ ಹೋರಾಟವನ್ನು ಸಂಪೂರ್ಣ ಬೆಂಬಲಿಸಲು ನಿರ್ಣಯಿಸಿದೆ. ಎಲ್ಲಾ ಬೇಡಿಕೆಗಳು ಈಡೇರುವ ತನಕ ಮತ್ತು ಬಂಧಿತರೆಲ್ಲರ ನಿಶ್ಶರ್ತ ಬಿಡುಗಡೆಯಾಗುವ ತನಕ ಹೋರಾಟವನ್ನು ಮುಂದುವರಿಸಲು ಸಮನ್ವಯ ಸಮಿತಿಯು ನಿರ್ಣಯಿಸಿದೆ. ಇದಕ್ಕೆ ಸಂಪೂರ್ಣ ಬೆಂಬಲ ಸಾರಿದ ರಾಜ್ಯಮಂಡಲಿಯು ಆಗಸ್ಟ್ 25ರಿಂದ 31ರ ತನಕ ಮಲಪ್ರಭಾ ರೈತಚಳುವಳಿಗೆ ಬೆಂಬಲವಾಗಿ ಮತ್ತು ಬಾಗೇಪಲ್ಲಿಯೂ ಸೇರಿ ಹಲವೆಡೆ ಪೋಲೀಸರು ನಡೆಸಿದ ದೌರ್ಜನ್ಯವನ್ನು ಪ್ರತಿಭಟಿಸಿ ಸೌಹಾರ್ದ ಕಾರ್ಯಕ್ರಮ ನಡೆಸಲು ತೀರ್ಮಾನಿಸಿದೆ. ಆಗಸ್ಟ್ 31ರಂದು ಎಲ್ಲಾ ಕಡೆಗಳಲ್ಲೂ ರೈತರ ಬೃಹತ್ ಸಭೆ, ಮೆರವಣಿಗೆ ನಡೆಸಿ ಪೋಲೀಸ್ ಕಚೇರಿಗಳೆದುರು ಸತ್ಯಾಗ್ರಹ ಮಾಡಲು ರಾಜ್ಯಮಂಡಳಿಯು ಕರೆ ಇತ್ತಿದೆ.

ರಾಜ್ಯದಾದ್ಯಂತ ಬೆಲೆಏರಿಕೆ ವಿರುದ್ಧ ನಡೆದಿರುವ ಚಳುವಳಿಯನ್ನು ಸ್ವಾಗತಿಸಿದ ಸಭೆಯು, ರೈತರ ಬೆಳೆಗೆ ಸರಿಯಾದ ಬೆಲೆ ಸಿಗುವಂತೆಯೂ, ರೈತರು ಮತ್ತು ಜನಸಾಮಾನ್ಯರು ಬಳಸುವ ವಸ್ತುಗಳ ಬೆಲೆ ಹತೋಟಿಗೆ ತರುವಂತೆಯೂ ಸರಕಾರವನ್ನು ಒತ್ತಾಯಿಸಿ ರಾಜ್ಯದಾದ್ಯಂತ ಚಳುವಳಿ ನಡೆಸಲು ಕರೆ ಇತ್ತಿದೆ.

ರೈತ ಕೃಷಿಕೂಲಿಗಾರರ ಪ್ರಶ್ನೆ : ರಾಜ್ಯಮಟ್ಟದ ಹೋರಾಟ :

ಭೂಮಿ ಇಲ್ಲದವರಿಗೆ ಭೂಮಿಯ ಪ್ರಶ್ನೆ, ಕೂಲಿಯ ಪ್ರಶ್ನೆ, ರೈತನ ಬೆಳೆಗೆ ಸರಿಯಾದ ಬೆಲೆಯ ಪ್ರಶ್ನೆ, ರೈತರನ್ನು ಬಾಧಿಸುತ್ತಲಿರುವ ಕರಗಳ ಪ್ರಶ್ನೆ, ಭ್ರಷ್ಟಾಚಾರದ ಪ್ರಶ್ನೆ,

(ಕಡೆಯ ಪುಟ ನೋಡಿ)

ಪಶ್ಚಿಮ ಬಂಗಾಳ:

ಆಗಸ್ಟ್ 9 ರಿಂದ ತಮ್ಮ ಪಕ್ಷವು "ಸಿ. ಪಿ. ಐ. (ಎಂ) ಪಶ್ಚಿಮ ಬಂಗಾಳವನ್ನು ಬಿಟ್ಟು ಹೊರಡಲಿ" ಎಂಬ ಘೋಷಣೆಗಳೊಂದಿಗೆ ರಾಜ್ಯಾದ್ಯಂತ ಚಳುವಳಿ ಹೂಡುವುದೆಂದು ಪ. ಬಂಗಾಳ ಕಾಂಗ್ರೈನ ಅಧ್ಯಕ್ಷ ಅಜಿತ್ ಪಂಜ ಹೇಳಿಕೆ ಕೊಟ್ಟಿದ್ದಾರೆ. ಅವರು 1942ರ ಆಗಸ್ಟ್ 9ರ ಭಾರತ ಬಿಟ್ಟು ತೊಲಗಿ ಚಳುವಳಿಯ ವಾರ್ಷಿಕದ ದಿನವನ್ನೇ ಇದಕ್ಕೆ ಆಯ್ಕೆಮಾಡಿದ್ದಾರೆ. ಭಾರತವು ಭಾರತೀಯರದಾಗಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ವಿದೇಶಿ ಆಡಳಿತಗಾರರಾಗಿದ್ದರು; ಆದ್ದರಿಂದ ಅವರು ತೊಲಗಲಿ ಎಂದು ಕೇಳುವುದಕ್ಕೆ ಭಾರತೀಯರಿಗೆ ಹಕ್ಕಿತ್ತು. ಪ. ಬಂಗಾಳ ಕಾಂಗ್ರೈನ ಖಾಸಗಿ ಆಸ್ತಿ ಎಂದು ಅಜಿತ್‌ಪಂಜ ಭಾವಿಸಿರುವಂತಿದೆ. ಆದ್ದರಿಂದಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಹೊರಡಿರೆಂದು ಕೇಳಲು ಹಕ್ಕಿದೆ ಎಂದುಕೊಂಡಿರಬಹುದು.

ಆದರೆ ಪಂಜ ಅವರ ದುರಾದೃಷ್ಟಕ್ಕೆ, ಪ ಬಂಗಾಳದಲ್ಲಿ ಮಾರ್ಕ್ಸ್‌ವಾದಿ ಪಕ್ಷ ಹೊರಗಿನದಲ್ಲವಷ್ಟೇ ಅಲ್ಲ, ಅದು ರಾಜ್ಯದಲ್ಲಿ ಬಲಿಷ್ಠವಾದ ರಾಜಕೀಯ ಪಕ್ಷವಲ್ಲದೆ, ರಾಜ್ಯದ ಆಳುವ ಎಡರಂಗದ ಮುಖ್ಯ ಅಂಗವೂ ಆಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪಶ್ಚಿಮ ಬಂಗಾಳವನ್ನು ಬಿಟ್ಟುಹೊರಡಲಿ ಎಂದು ಕಾಂಗ್ರೆಸ್ ಕೇಳುತ್ತಿರುವುದು ಹೊಸತೇನಲ್ಲ. ಈ ನಿರ್ದಿಷ್ಟ ಘೋಷಣೆ ಕೂಗದೆ ಅವರು ಪ್ರಯತ್ನಿಸಿದ್ದರು. ಅವರು ಮಾರ್ಕ್ಸ್‌ವಾದಿ ಪಕ್ಷ ಕಾರ್ಯಕರ್ತರ ಮೇಲೆ ದೈಹಿಕ ಹಲ್ಲೆ ನಡೆಸಿದ್ದರು, ಒತ್ತಾಯದಿಂದ ಸಿ. ಪಿ. ಐ. (ಎಂ) ಕಚೇರಿಗಳು ಮತ್ತು ಟ್ರೇಡ್ ಯೂನಿಯನ್ ಕಚೇರಿಗಳನ್ನು ಆಕ್ರಮಿಸಿದ್ದರು, ಸಾವಿರಾರು ಜನರನ್ನು ಅವರ ವಸತಿಗಳಿಂದ ಹೊರದೂಡಿದ್ದರು, ಸಾವಿರಾರು ಜನ ತಮ್ಮ ಕಾರ್ಖಾನೆಗಳು ಮತ್ತು ಕಚೇರಿಗಳಿಗೆ ಹೋಗದಂತೆ ತಡೆಹಿಡಿದಿದ್ದರು– ಇವೆಲ್ಲವೂ 1971 ರಿಂದ 1977ರ ಅರೆಫ್ಯಾಸಿಸ್ಟ್ ದಬ್ಬಾಳಿಕೆ ಅವಧಿಯಲ್ಲಿ, ಪಶ್ಚಿಮ ಬಂಗಾಳದಿಂದ ಮಾರ್ಕ್ಸ್‌ವಾದಿ ಪಕ್ಷವನ್ನು ಹೊರದೂಡಲು ನಡೆಸಿದ ಪ್ರಯತ್ನವಾಗಿತ್ತು, ಅವರಿಗೆ ಪೋಲೀಸು ಮತ್ತು ಸಶಸ್ತ್ರ ಪಡೆಗಳ ಬೆಂಬಲ ಇತ್ತು ಮತ್ತು ಕೇಂದ್ರದ ಪೂರ್ಣ ಸಹಾಯ ಇತ್ತು.

ಕಾಂಗ್ರೆಸ್ಸಿನ ಈ ಅಪರಾಧಿ ದಾಖಲೆಯ ವಿರುದ್ಧ 1977 ರಿಂದಲೂ ರಾಜ್ಯದ ಜನತೆ ತಮ್ಮ ತೀರ್ಪನ್ನು ನೀಡುತ್ತಿದ್ದಾರೆ. ಮೊದಲು ಲೋಕಸಭೆ ಚುನಾವಣೆಯಲ್ಲಿ, ನಂತರ ವಿಧಾನಸಭೆ ಚುನಾವಣೆಯಲ್ಲಿ, ನಂತರ ಪಂಚಾಯತಿ ಚುನಾವಣೆಯಲ್ಲಿ ತೀರ್ಪು ನೀಡಿದ್ದಾರೆ. ಆದರೆ ಕೇಂದ್ರದಲ್ಲಿ ಪುನಃ ಅಧಿಕಾರಕ್ಕೆ ಬಂದ ಕಾಂಗ್ರೆಸ್ (ಐ) ರೈಟರ್ಸ್ ಭವನದ ಸಚಿವರ ಕುರ್ಚಿಗಳನ್ನು ಕಸಿದುಕೊಳ್ಳಲು ಈ ಅಸಹನೆ ತೋರಿಸುತ್ತಿದೆ.

ಪಂಚಾಯತಿಗಳ ಬಗ್ಗೆ ಆಗಲೀ, ಅಥವಾ ಭೂಸುಧಾರಣೆಗಳ ಬಗ್ಗೆ ಆಗಲೀ ಅಥವಾ ಸಿ. ಪಿ. ಐ. (ಎಂ) ಹಿಂಸಾಚಾರದ ಬಗ್ಗೆ ಆಗಲೀ, ಪಂಜ ಮಾಡಿರುವ ಆಪಾದನೆಗಳಿಗೆ ಆಧಾರವೇ ಇಲ್ಲ.

ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನತೆಗೆ ಉದ್ಯೋಗವನ್ನು ಒದಗಿಸಿರುವ ರಾಜ್ಯಗಳಲ್ಲಿ ಪ.ಬಂಗಾಳ ಮೊದಲಿನದು ಎಂದು ಕೇಂದ್ರ ಸರ್ಕಾರದ ಪರವಾಗಿ ಲೋಕಸಭೆಯಲ್ಲಿ ಹೇಳಿಕೆ ನೀಡಲಾಗಿದೆ. ದುಡಿಮೆಗಾಗಿ ಧಾನ್ಯ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ವಾಮರಂಗ ಸರ್ಕಾರವು 1979ರ ಜೂನ್ ಕೊನೆಯ ವೇಳೆಗೆ 44 ಕೋಟಿ ರೂ.ಗಳನ್ನು ವಿತರಣೆ ಮಾಡಿದೆ 2.5 ಮಿಲಿಯನ್ ಜನರಿಗೆ 1.9 ಮಿಲಿಯ ಟನ್ ಗೋಧಿ ಮತ್ತು ಉದ್ಯೋಗವನ್ನು ನೀಡಿದೆ. ಪ್ರವಾಹಗಳಿಂದ ನಾಶವಾದ 400,000 ಮನೆಗಳನ್ನು ಪುನಃ ಕಟ್ಟಿದೆ. 5000 ಹೊಸ ಕೊಳವೆಬಾವಿಗಳನ್ನು ತೆಗೆದಿದೆ.

ಕಾಂಗ್ರೈನ ಯೋಜನೆಗಳೇನು ?

78,000 ಬಾವಿಗಳನ್ನು ತೋಡಿ, 100,000 ಕೆರೆಗಳನ್ನು ಪುನಃ ಅಗೆಸಿದೆ. ಅಜಿತ್‌ಪಂಜಗೆ ಇವೆಲ್ಲ ಬೇಕಾಗಿಲ್ಲ.

ಕಾಂಗ್ರೆಸ್ ಪಕ್ಷದ ಆಳಿಕೆಯಲ್ಲಿ ಭೂಸುಧಾರಣೆಗಳ ಬಗ್ಗೆ ಅದು ಮಾತನಾಡುತ್ತಿತ್ತು. ಆದರೆ ಗೇಣಿದಾರರು ಮತ್ತು ಕೃಷಿಕಾರ್ಮಿಕರ ಹಿತಾಸಕ್ತಿಗಳ ರಕ್ಷಣೆ ಅದೇನನ್ನೂ ಮಾಡಲಿಲ್ಲ. ವಾಮರಂಗ ಸರ್ಕಾರದ ಅವಧಿಯಲ್ಲಿ "ಬರ್ಗಾ ಯೋಜನೆ"ಯ ಅನ್ವಯ 900,000 ಗೇಣಿದಾರರನ್ನು ದಾಖಲೆ ಮಾಡಿಕೊಳ್ಳಲಾಗಿದೆ. ಪಂಜ ಇದನ್ನು ನಿರ್ಲಕ್ಷಿಸಿ, ಭೂಮಾಲೀಕರ ವಕ್ತಾರರಾಗಿ ಮಾತನಾಡಿದ್ದಾರೆ,

ವಾಮರಂಗ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ 164 ವಾಮರಂಗ ಕಾರ್ಯಕರ್ತರು ಕೊಲೆಗೀಡಾಗಿ, ಬಹುತೇಕ ಆರೋಪಿಗಳು ಕಾಂಗ್ರೆಸ್ (ಐ) ಅಂಶಗಳೇ ಆಗಿರುವಾಗ, ಪಂಜ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲೆ ಹಿಂಸಾಚಾರದ ಆರೋಪ ಮಾಡಿರುವುದು ಆಶ್ಚರ್ಯಕರವಾಗಿದೆ. ಕಾಂಗ್ರೆಸ್ (ಐ)ನ ಗುಂಪುಗಳ ಅಂತಃಪಕ್ಷ ಗಲಾಟೆಗಳಲ್ಲಿ ಕಾಂಗ್ರೆಸ್(ಐ)ನವರಿಂದಲೇ ಕಾಂಗ್ರೆಸ್ (ಐ)ನ 32 ಕಾರ್ಯಕರ್ತರು ಕೊಲೆಯಾಗಿದ್ದಾರೆ.

ಮಾರ್ಕ್ಸ್‌ವಾದಿ ಪಕ್ಷವು ಪ್ರತ್ಯೇಕತಾವಾದಿ ಚಳುವಳಿಯನ್ನು ಪ್ರೋತ್ಸಾಹಿಸುತ್ತಿದೆ ಎಂದು ಪಂಜ ಆಪಾದಿಸುವಾಗ, ಕಾಂಗ್ರೆಸ್ (ಐ) ಕೇಂದ್ರ ಸರ್ಕಾರ ಅಸ್ಸಾಂನ ಪ್ರತ್ಯೇಕತಾವಾದಿ ಚಳುವಳಿಯನ್ನು ವಿರೋಧಿಸುತ್ತಿರುವಾಗ, ರಾಜ್ಯದ ಕಾಂಗ್ರೈನ ನಾಯಕರಾದ ತರಣಿಕಾಂತರಾಯ್, ರಬಿ ಸರ್ಕಾರ್, ಪ್ರಭಾತ್, ಇಶೋರ್, ಶಂಕರ್ ಇಶೋರ್ ಮುಂತಾದವರು ಉತ್ತರ ಬಂಗಾಳದ ಉತ್ತರಖಂಡ ಪ್ರತ್ಯೇಕತಾವಾದಿ ಚಳುವಳಿಗೆ ಬೆಂಬಲ ನೀಡುತ್ತಿದ್ದಾರೆ, ಪ್ರತ್ಯೇಕತಾವಾದಿ ಚಳುವಳಿಯನ್ನು ವಿರೋಧಿಸುತ್ತಿರುವುದಕ್ಕೆ ಅಸ್ಸಾಂನಲ್ಲಿ ಸಿ. ಪಿ. ಐ (ಎಂ) ಕಾರ್ಯಕರ್ತರು ಹಲ್ಲೆಗೀಡಾಗಿ ಕೊಲೆಯಾಗುತ್ತಿದ್ದಾರೆ ಎಂಬುದನ್ನು ಸುಲಭವಾಗಿ ಮರೆತುಬಿಡುತ್ತಾರೆ.

ತಮ್ಮ ಪಕ್ಷಕ್ಕೆ ಜನತೆಯ ಬೆಂಬಲವಿಲ್ಲ ಎಂಬುದು ಅಜಿತ್ ಪಂಜಗೆ ಗೊತ್ತು. ಆದರೆ ಆಪಾದನೆಗಳನ್ನು ಹೊರಿಸಿ, ಚಳುವಳಿ ಹೂಡಿದರೆ, ಕೇಂದ್ರದಲ್ಲಿ ಆಳುತ್ತಿರುವ ಅವರ ಪಕ್ಷವು ಸಹಾಯಕ್ಕೆ ಬಂದು ತಮ್ಮನ್ನು ರೈಟರ್ಸ್ ಭವನಕ್ಕೆ ಕೊಂಡೊಯ್ಯುತ್ತದೆ ಎಂದು ಅವರು ಆಸೆ ಇಟ್ಟುಕೊಂಡಿದ್ದಾರೆ.

ಕಾಂಗ್ರೈನ ಗುಂಪುಕಲಹಗಳು ಮತ್ತಷ್ಟು ಅಂಶಗಳನ್ನು ಹೊರಗೆಡಹಿವೆ. ಪ. ಬಂಗಾಳ ಕಾಂಗ್ರೈನಲ್ಲಿ ಅಜಿತ್ ಪಂಜರ ವೈರಿಗಳಲ್ಲೊಬ್ಬರಾದ ಸುಬ್ರತ ಮುಖರ್ಜಿ ಅವರು ಅನೇಕ ವಿಚಾರಗಳ ಆಧಾರದ ಮೇಲೆ ಆಗಸ್ಟ್ 9ರ ಚಳುವಳಿಯನ್ನು ವಿರೋಧಿಸಿದ್ದಾರೆ.

ಮುಖರ್ಜಿ ಅವರ ಗುಂಪಿನ ವಕ್ತಾರರೊಬ್ಬರು ಹೇಳುವ ಹಾಗೆ ಪಂಜ ಅವರಿಗೆ "ಶ್ರೀ ಘಾನಿಖಾನ್ ಚೌಧುರಿಯವರು ಚಳುವಳಿಯನ್ನು ಆರಂಭಿಸಲು ಪ್ರೇರೇಪಿಸಿದ್ದಾರೆ. ಏಕೆಂದರೆ ಲೋಕಸಭೆಯ ಇಂಧನ ಸಚಿವಾಲಯದ ಮೇಲಿನ ಚರ್ಚೆಯಲ್ಲಿ ಶ್ರೀ ಖಾನ್ ಚೌಧುರಿಯವರು 'ಇಕ್ಕಟ್ಟಿಗೆ ಸಿಲುಕಿದ್ದರು'. ಅದರಲ್ಲಿ ಶ್ರೀ ಖಾನ್ ಚೌಧುರಿಯವರು ಪ. ಬಂಗಾಳ ಸರ್ಕಾರವು ಕಲ್ಲಿದ್ದಲಿನ ಕಳ್ಳಸಾಗಾಣಿಕೆಯಲ್ಲಿ ತೊಡಗಿದೆಯೆಂದು ಆಪಾದಿಸಿದ್ದರು." (ದಿ ಸ್ಟೇಟ್ಸ್‌ಮನ್, ಆಗಸ್ಟ್ 1) "ಒಬ್ಬ ವ್ಯಕ್ತಿ ತೊಂದರೆಗೆ ಸಿಕ್ಕಿದ್ದಾನೆಂಬ ಸಣ್ಣ ಕಾರಣದಿಂದ ಒಂದು ಚಳುವಳಿಯನ್ನು ಆರಂಭಿಸಲಾಗದು" ಎಂದು ಆ ಗುಂಪಿನ ವಕ್ತಾರರು ಹೇಳಿದರೆಂದೂ ವರದಿಯಾಗಿದೆ.

ಸುಬ್ರತ ಮುಖರ್ಜಿಯವರು "ಸಿ.ಪಿ.ಐ.(ಎಂ) ಪಶ್ಚಿಮ ಬಂಗಾಳ ಬಿಟ್ಟು ಹೊರಡಲಿ" ಎಂಬ ಘೋಷಣೆಗೆ ವಿರೋಧವಾಗಿದ್ದೇನೆಂದು ಹೇಳಿದ್ದಾರೆ. "ಸಿ.ಪಿ.ಐ (ಎಂ)ನ ಅನುಯಾಯಿಗಳು ವಿದೇಶೀಯರಲ್ಲ. ಆದ್ದರಿಂದ ಬಂಗಾಳ ಬಿಡಿರೆಂದು ಅವರಿಗೆ ಹೇಳುವ ಪ್ರಶ್ನೆಯೇ ಇಲ್ಲ. 'ರೈಟರ್ಸ್ ಭವನ ಬಿಟ್ಟು ಹೊರಡಿರಿ' ಎಂಬುದು ಸರಿಯಾದ ಘೋಷಣೆ" ಎಂದು ಅವರು ಹೇಳಿದ್ದಾರೆ.

"ಚಳುವಳಿಯನ್ನು ಆರಂಭಿಸಲು ಇದು ಸರಿಯಾದ ಸಮಯವಲ್ಲ ಎಂದೂ ಅವರು ಹೇಳಿದ್ದಾರೆ. ಈಶಾನ್ಯ ರಾಜ್ಯಗಳ ಪರಿಸ್ಥಿತಿ ಇನ್ನೂ ಸೂಕ್ಷ್ಮವಾಗಿದೆ. ಆರ್ಥಿಕ ಪರಿಸ್ಥಿತಿ ಇನ್ನೂ ತೃಪ್ತಿಕರವಾಗಿಲ್ಲ. ಅಲ್ಲದೆ ಒಂದು ಚಳುವಳಿಗೆ ಅಪಾರ ತಳಹದಿ ಕೆಲಸಗಳು ಅಗತ್ಯ. ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಬೇಕು. ಜನತೆ ಸಿ.ಪಿ.ಐ.(ಎಂ) ಸರ್ಕಾರದಲ್ಲಿ ಕ್ರಮೇಣ ಅತೃಪ್ತಿ ತಳೆಯುತ್ತಿದ್ದಾರೆಂದೂ ಅವರು ಹೇಳಿದರು. ಕಾಂಗ್ರೆಸ್ (ಐ) ಮೊದಲು ಇದನ್ನು ಬಂಡವಾಳ ಮಾಡಿಕೊಳ್ಳಬೇಕು".

ಸುಬ್ರತ ಮುಖರ್ಜಿ ಇದನ್ನೂ ಸೂಚಿಸಿದ್ದಾರೆ. "ಸರ್ಕಾರವನ್ನು ತಟ್ಟಿನೆ ಉರುಳಿಸುವುದರಿಂದ ಲಾಭವೇನೂ ಆಗುವುದಿಲ್ಲ ಎಂಬುದನ್ನು ಹಿಂದಿನ ಅನುಭವ ತೋರಿಸಿಕೊಟ್ಟಿದೆ. ಮತದಾರರಿಗೆ ಅದು ಇಷ್ಟವಾಗುವುದಿಲ್ಲ. ಈಗ ಅಂಥ ಕ್ರಮಕೈಗೊಂಡರೆ 1969 ರಲ್ಲಿ ಆದಂತೆ ಸಿ.ಪಿ.ಐ.(ಎಂ) ನವರು 'ಹುತಾತ್ಮ'ರಾಗುತ್ತಾರೆ".

ಅಮೃತ ಬಜಾರ್ ಪತ್ರಿಕೆಯ ಪ್ರಕಾರ, ಮುಖರ್ಜಿಯವರು "ಅಂಥ ಚಳುವಳಿಯನ್ನು ಒಬ್ಬ ಕೇಂದ್ರ ಮಂತ್ರಿ ಪ್ರೇರೇಪಿಸುವುದಾದರೆ, ಕೇಂದ್ರವು ರಾಜ್ಯದ ವಾಮರಂಗ ಸರ್ಕಾರವನ್ನು ಉರುಳಿಸುವುದರಲ್ಲಿ ಆಸಕ್ತವಾಗಿದೆ ಎಂದು ಪ. ಬಂಗಾಳದ ಜನರು ತಕ್ಷಣ ತಿಳಿದುಕೊಳ್ಳುತ್ತಾರೆ ಎಂಬುದನ್ನು ಸ್ಪಷ್ಟಪಡಿಸಿದರು. ಈಗಿನ ಸಿ.ಪಿ.ಐ. (ಎಂ) ನಾಯಕತ್ವದ ವಾಮರಂಗ ಸರ್ಕಾರದ ಪತನಕ್ಕೆ ಚಳುವಳಿ ಹೂಡಿದರೆ ರಾಜ್ಯದ ಕಾಂಗ್ರೈ ಅಪಾಯಕಾರಿ ಪರಿಣಾಮಗಳನ್ನು ಎದುರಿಸಬೇಕಾಗಬಹುದು. ಪಕ್ಷಕ್ಕೆ ಹಿಂದೆ ಇಂಥ ಅನುಭವವಾಗಿದೆ ಎಂದೂ ಅವರು ಹೇಳಿದರು."

ಸುಬ್ರತ ಮುಖರ್ಜಿ ಮತ್ತು ಈಗ ಕೇಂದ್ರದಲ್ಲಿ ಅವರ ಆಶ್ರಯದಾತರಾಗಿರುವ ಪ್ರಣಬ್‌ಕುಮಾರ್ ಮುಖರ್ಜಿ ಇವರಿಬ್ಬರೂ ಘಾನಿ ಖಾನ್ ಚೌಧುರಿ ಮತ್ತು ಅಜಿತ ಪಂಜ ಅವರಿಗಿಂತ ಕಡಿಮೆ ಕಮ್ಯುನಿಸ್ಟ್ ವಿರೋಧಿಗಳೇನಲ್ಲ. ಪ. ಬಂಗಾಳದಲ್ಲಿ ಸಿ.ಪಿ.ಐ(ಎಂ)ನ ಮೇಲೆ ಅರೆಫ್ಯಾಸಿಸ್ಟ್ ದಬ್ಬಾಳಿಕೆಯನ್ನು ನಡೆಸಿದ ಪ್ರಮುಖ ನಾಯಕರಲ್ಲಿ ಸುಬ್ರತ ಮುಖರ್ಜಿಯೂ ಒಬ್ಬರು. ಅವರ ಸದ್ಯದ ಹೇಳಿಕೆಯು, ರಾಜ್ಯ ಕಾಂಗ್ರೈನ ಗುಂಪುಕಲಹಗಳ ಮಟ್ಟವನ್ನು ಮಾತ್ರ ತೋರಿಸುತ್ತದಷ್ಟೆ.

ಸುಬ್ರತ ಮುಖರ್ಜಿ ಮತ್ತು ಅವರ ಗುಂಪು ಚಳುವಳಿಯನ್ನು ವಿರೋಧಿಸಿದರೆ, ಪಂಜ ಅವರಿಗೆ ಇನ್ನೊಬ್ಬ ಕಮ್ಯುನಿಸ್ಟ್ ವಿರೋಧಿ ಧುರೀಣ ಕೇಂದ್ರ ಸಂಪರ್ಕ ಸಚಿವ ಸಿ. ಎಂ. ಸ್ಟೀಫನ್ನರ ಬೆಂಬಲಸಿಕ್ಕಿದೆ. ಸ್ಟೀಫನ್ನರ ಭಾಷಣಗಳ ಶಾಶ್ವತ ಸಾರಾಂಶ ಎಂದರೆ ಕೇರಳದ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗದ ಸರ್ಕಾರವನ್ನು ಅರಬ್ಬಿ ಸಮುದ್ರಕ್ಕೆ ಎಸೆಯುವುದು; ಕಲ್ಕತ್ತಕ್ಕೆ ಹೋದ ಈ ಧುರೀಣ, ಅಲ್ಲಿನ ವಾಮರಂಗ ಸರ್ಕಾರದ ಬಗ್ಗೆ ಎಡತಾಕಲು ನಿರ್ಧರಿಸಿದ್ದಾರೆ.

ಕೇಂದ್ರಮಂತ್ರಿಯೊಬ್ಬರು ಚಳುವಳಿಗೆ "ಸ್ಫೂರ್ತಿ" ನೀಡುತ್ತಿದ್ದಾರೆಂದು ಸಿ. ಪಿ. ಐ (ಎಂ) ಆಪಾದಿಸಲು ಅವಕಾಶವನ್ನೇ ಸ್ಟೀಫನ್ನರು ಕೊಡಲು ಇಚ್ಛಿಸುವುದಿಲ್ಲವೆಂದು ಪತ್ರಿಕಾವರದಿಗಳು ಹೇಳಿವೆ. ಆದರೆ "ಪ್ರತಿಗಾಮಿ, ಸರ್ವಾಧಿಕಾರಿ ಮತ್ತು ಮಾರ್ಕ್ಸ್‌ವಾದಿಗಳು ವಿದೇಶಿ ಪ್ರೇರಿತ ಸಿದ್ಧಾಂತವನ್ನು ನಾಶಪಡಿಸಬೇಕೆಂದು" ಅವರು ದೃಢರಾಗಿದ್ದರೆಂದು ಹೇಳಿವೆ. ಜ್ಯೋತಿ ಬಸು ಅವರನ್ನೇ ಬಂಗಾಳಕೊಲ್ಲಿಗೆ ಎಸೆಯುವಷ್ಟು ಅವರು ಹೋಗುತ್ತಾರೆ. ಈ ಕರೆಯನ್ನು ಕಾಂಗ್ರೈ ಕಾರ್ಯಕರ್ತರಿಗೆ ನೀಡಿದ ಸ್ಟೀಫನ್ ಮಾರ್ಕ್ಸ್‌ವಾದಿ ಪಕ್ಷದಲ್ಲಿ "ಸಣ್ಣ ಕ್ರಿಮಿ"ಗಳು ಇದ್ದಾರೆಂದೂ, ಅವರು ಹೇಗೋ ಕೇರಳ ಮತ್ತು ಪ. ಬಂಗಾಳಗಳಲ್ಲಿ ಅಧಿಕಾರಕ್ಕೆ ಬಂದರೆಂದೂ ಭರವಸೆ ನೀಡಿದರು.

ಕಾಂಗ್ರೈನ ಈ "ಅತಿಮಾನವ" ತನ್ನ ರಾಜ್ಯದಲ್ಲಿ ಲೋಕಸಭೆ ಚುನಾವಣೆ ಎದುರಿಸಲು ಧೈರ್ಯಸಾಲದೆ, ನವದೆಹಲಿಗೆ ಬಂದು, ಅಲ್ಲಿ ಸೋತು, ಮತ್ತೆ ಕರ್ನಾಟಕದಲ್ಲಿ ಆಶ್ರಯ ಪಡೆದು, ಲೋಕಸಭೆ ಪ್ರವೇಶಿಸಿ ಮಂತ್ರಿಯಾಗಬೇಕಾಯಿತು ಎಂಬುದನ್ನು ತನ್ನ "ಅತಿಮಾನವ" ಸಹೋದ್ಯೋಗಿಗಳಿಗೆ ಹೇಳಿಕೊಳ್ಳುವುದನ್ನು ಮರೆತುಬಿಟ್ಟಿದ್ದಾರೆ.

ಇದು ಹೇಗಾದರೂ, ಜನತೆಯ ಬೆಂಬಲಗಳಿಸಿರುವ, ನ್ಯಾಯಬದ್ಧವಾಗಿ ಆಯ್ಕೆಯಾಗಿರುವ ತ್ರಿಪುರ, ಕೇರಳ ಮತ್ತು ಬಂಗಾಳಗಳ ನ್ಯಾಯಬದ್ಧ ಸರ್ಕಾರಗಳನ್ನು ಉರುಳಿಸಲು ಆ ರಾಜ್ಯಗಳ ಕಾಂಗ್ರೈಗಳು ತಹತಹಿಸುತ್ತಿವೆ ಎನ್ನುವುದಂತೂ ಸ್ಪಷ್ಟ. ಇದು ಗಂಭೀರ ಪರಿಣಾಮಗಳಿರುವ ಆಟ.

ಆರ್ಥಿಕ ಸಮೀಕ್ಷೆ:

ನಿರುದ್ಯೋಗ ಭತ್ತೆ ಕೊಡಲು ಕೇಂದ್ರ ಸರಕಾರದ ನಕಾರ

ಆರ್. ಚಂದ್ರ

ನಿರುದ್ಯೋಗ ಭತ್ತೆಗೆ ನಕಾರ:

ದುಡಿಯುವ ಪ್ರಾಯದ ಜನರಿಗೆಲ್ಲಾ ಉದ್ಯೋಗ ಕೊಡಬೇಕು, ಉದ್ಯೋಗ ಪಡೆಯುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ಸಂವಿಧಾನದಲ್ಲಿ ನಿರೂಪಿಸಬೇಕು ಮತ್ತು ಉದ್ಯೋಗ ಸಿಗುವ ತನಕ ನಿರುದ್ಯೋಗ ಭತ್ತೆಯನ್ನಾದರೂ ಸರಕಾರ ಕೊಡಬೇಕು ಎಂಬ ಬೇಡಿಕೆಗಳು ಪ್ರಜಾಸತ್ತಾತ್ಮಕ ಆಂದೋಳನದ ಪ್ರಮುಖ ಬೇಡಿಕೆಗಳು. ಆದರೆ, ಸ್ವಾತಂತ್ರ್ಯೋತ್ತರದ ಭಾರತದಲ್ಲಿ ಮೊದಲ 30ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಾಗಲೀ, ನಂತರದ 30 ತಿಂಗಳುಗಳ ಜನತಾ ಆಡಳಿತದಲ್ಲಾಗಲೀ ನಿರುದ್ಯೋಗ ಸಮಸ್ಯೆಯು ಪರಿಹಾರವಾಗುವ ಬದಲು ವರ್ಷವರ್ಷಕ್ಕೂ ಆ ಸಮಸ್ಯೆಯು ಹೆಚ್ಚುತ್ತಲೇ ಇದೆ. ಸದ್ಯದಲ್ಲಿಯೇ ನಿರುದ್ಯೋಗಸ್ಥರ ಸಂಖ್ಯೆಯು ಉದ್ಯೋಗಸ್ಥರ ಸಂಖ್ಯೆಗಿಂತಲೂ ಹೆಚ್ಚುವ ಭಯವಿದೆ!

'ಸುಭದ್ರ ಸರಕಾರ', 'ಬಡತನ ನಿವಾರಣೆ', 'ಬೆಲೆ ನಿಯಂತ್ರಣ' ಇತ್ಯಾದಿ ಆಶ್ವಾಸನೆಗಳನ್ನು ನೀಡಿ ಕೇಂದ್ರದಲ್ಲಿ ಮತ್ತು ಹೆಚ್ಚಿನ ರಾಜ್ಯಗಳಲ್ಲಿ ಈ ವರ್ಷ ಪುನಃ ಅಧಿಕಾರಕ್ಕೆ ಬಂದಿರುವ ಇಂದಿರಾ ಸರಕಾರದ ನಿರುದ್ಯೋಗ ನಿವಾರಣೆಯ ಕುರಿತಾದ ಧೋರಣೆ ಏನು? ಈ ದಿಸೆಯಲ್ಲಿ ಹೊಸ ಸರಕಾರ ಇನ್ನೂ ಯಾವ ನಿರ್ದಿಷ್ಟವಾದ ಯೋಜನೆಯನ್ನೂ ಕೈಗೊಳ್ಳಲಿಲ್ಲ. ನಿರುದ್ಯೋಗ ನಿವಾರಣೆಯಂತೂ ದೂರದ ಧ್ಯೇಯವಾಗಿಯೇ ಉಳಿಯುವುದು ಆದರೆ, ಉದ್ಯೋಗ ಸಿಗುವತನಕ ನಿರುದ್ಯೋಗಿಗಳಿಗೆ ಸಾಂಕೇತಿಕವಾಗಿ ಭತ್ತೆಯನ್ನಾದರೂ ಕೊಡಬಹುದಲ್ಲಾ? ಕೇಂದ್ರ ಕಾರ್ಮಿಕಮಂತ್ರಿ ಶಾಖೆಯ ಮೂಲದಿಂದ ತಿಳಿದುಬಂದಂತೆ ಇಂದಿರಾ ಸರಕಾರ ನಿರುದ್ಯೋಗ ಭತ್ತೆ ನೀಡಲು ನಿರಾಕರಿಸುತ್ತಿದೆ! (ಇಂಡಿಯನ್ ಎಕ್ಸ್‌ಪ್ರೆಸ್: 5-8-80) ಯಾಕೆ? ನಿರುದ್ಯೋಗ ಭತ್ತೆ ಕೊಡಲು ವಿಪರೀತ ಖರ್ಚಾಗುತ್ತದೆ, ಸರಕಾರ ಸದ್ಯ ಆ ಭಾರ ಹೊರಲಾರದು ಎಂದು ಹೇಳಲಾಗುತ್ತಿದೆ. ಸರಕಾರದ ನಿಲುವೇನೆಂದರೆ, ಉದ್ಯೋಗವಿಲ್ಲದೆ, ಉತ್ಪಾದನೆ ಇಲ್ಲದೆ, ಸುಮ್ಮನೆ ಭತ್ತೆಯ ರೂಪದಲ್ಲಿ ನಿರುದ್ಯೋಗಿಗಳಿಗೆ ಹಣ ವಿತರಣೆ ಮಾಡಬಾರದು, ಅದರ ಬದಲು ಉದ್ಯೋಗ ಹೆಚ್ಚಿಸುವ ಯೋಜನೆಗಳನ್ನು ಹೆಚ್ಚುಹೆಚ್ಚಾಗಿ ಕಾರ್ಯಗತಗೊಳಿಸಬೇಕು ಎಂದು. ಇಂತಹ ವಾದಗಳನ್ನು ಹಿಂದಿನ ಜನತಾ ಮತ್ತು ಕಾಂಗ್ರೆಸ್ ಸರಕಾರಗಳೂ ಮುಂದೊಡ್ಡುತ್ತಿದ್ದುವು.

ನಿರುದ್ಯೋಗ ಭತ್ತೆಯ ವೆಚ್ಚ ಎಷ್ಟು?:

ನಿರುದ್ಯೋಗ ಭತ್ತೆ ನೀಡಲು ವೆಚ್ಚವಾದರೂ ಎಷ್ಟಾಗುವುದು? ಸರಕಾರಿ ಅಧಿಕೃತ ಅಂದಾಜುಗಳನ್ನೇ ಪರಿಶೀಲಿಸೋಣ. ಡಿಸೆಂಬರ್, 1979ರ ಅಂತ್ಯದಲ್ಲಿ ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ಹೆಸರು ದಾಖಲೆ ಮಾಡಿದ ನಿರುದ್ಯೋಗಿಗಳ ಸಂಖ್ಯೆ 14.33 ಮಿಲಿಯ. ಇವರಲ್ಲಿ ಶೇ. 10ರಷ್ಟು, ಅಂದರೆ 1 43 ಮಿಲಿಯ ನಿರುದ್ಯೋಗಸ್ಥರು ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ 5 ವರ್ಷಗಳಿಗಿಂತಲೂ ಹೆಚ್ಚು ಕಾಲ ತಮ್ಮ ಹೆಸರುಗಳನ್ನು ದಾಖಲೆ ಮಾಡಿಕೊಂಡು ಬಂದವರೆಂದು ಪರಿಗಣಿಸೋಣ. ಇವರಿಗಷ್ಟೇ ತಿಂಗಳಿಗೆ ರೂ. 50ರಷ್ಟು ನಿರುದ್ಯೋಗ ಭತ್ತೆಯನ್ನು ನೀಡಲು ಆಡಳಿತ ವೆಚ್ಚವೂ ಸೇರಿ ವರ್ಷಕ್ಕೆ ರೂ. 88 ಕೋಟಿ ಬೇಕಾಗಬಹುದು ಎಂದು ಅಂದಾಜು ಮಾಡಲಾಗಿದೆ 1977-78ರ ಸಾಲಿನಲ್ಲಿದ್ದ 15ರಿಂದ 59 ವರ್ಷ ಪ್ರಾಯದ ಎಲ್ಲಾ ನಿರುದ್ಯೋಗಿಗಳಿಗೆ ತಿಂಗಳಿಗೆ ರೂ. 50ರಂತೆ ಭತ್ತೆ ನೀಡಲು ವರ್ಷಕ್ಕೆ ರೂ. 1050 ಕೋಟಿ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ ವರ್ಷಕ್ಕೆ ರೂ 20,000 ಕೋಟಿಗಿಂತಲೂ ಖರ್ಚು ಮಾಡುತ್ತಿರುವ ಕೇಂದ್ರ ಸರಕಾರಕ್ಕೆ 14-15 ಮಿಲಿಯ ನಿರುದ್ಯೋಗಿಗಳಿಗಾಗಿ ರೂ. 1050 ಕೋಟಿ ಖರ್ಚು ಮಾಡಲು ಸಾಧ್ಯವಿಲ್ಲವೆ? ಹೋಗಲಿ, ಅವರಲ್ಲಿ ಕೇವಲ ಶೇ. 10ರಷ್ಟು, ಸುಮಾರು 1 5 ಮಿಲಿಯ ನಿರುದ್ಯೋಗಿಗಳಿಗಾದರೂ ರೂ. 88 ಕೋಟಿಯಷ್ಟು ಖರ್ಚುಮಾಡಲು ಅನುಕೂಲವಿಲ್ಲವೆ?

ಇಲ್ಲದೆ ಏನು? ಆದರೆ, ಸರಕಾರದ ಸಂಪನ್ಮೂಲಗಳ ಸಿಂಹಪಾಲು ರಕ್ಷಣಾ ಖಾತೆಗೆ, ಪೋಲೀಸು ಖಾತೆಗೆ, ಆಡಳಿತ ವೆಚ್ಚಕ್ಕೆ ಮತ್ತು ಭೂಮಾಲಕರಿಗೆ, ಶ್ರೀಮಂತ ರೈತರಿಗೆ, ಬಂಡವಾಳಶಾಹಿಗಳಿಗೆ ವ್ಯವಸಾಯ, ಕೈಗಾರಿಕೆ ಮತ್ತು ವಿದೇಶಿ ವ್ಯಾಪಾರಗಳಿಗೆ ಧನಸಹಾಯ ಮಾಡಲು ವಿನಿಯೋಗವಾಗುವುದು. ಆರ್ಥಿಕ ಅಭಿವೃದ್ಧಿಗೆ, ಬಡತನ ನಿರುದ್ಯೋಗಗಳ ಪರಿಹಾರಕ್ಕೆ ಮಾತ್ರ ಸರಕಾರಕ್ಕೆ ಸಂಪನ್ಮೂಲ ಸಿಗುತ್ತಿಲ್ಲ! 1980-81ರಲ್ಲಿ ದೇಶದ ರಕ್ಷಣಾ ವೆಚ್ಚವೇ ರೂ. 3715 ಕೋಟಿಯಷ್ಟಾಗಿದೆ, 1977-78ರಲ್ಲಿ ಕೇಂದ್ರಸರಕಾರವು ಕೃಷಿ, ಕೈಗಾರಿಕೆ ಮತ್ತು ವ್ಯಾಪಾರಕ್ಕೆ ರೂ. 1089 ಕೋಟಿಯಷ್ಟು ಧನಸಹಾಯ ನೀಡಿದೆ. ಅದರಲ್ಲಿ, ರೂ. 363 ಕೋಟಿಯಷ್ಟು ಧನಸಹಾಯ ಬೃಹತ್ ವ್ಯಾಪಾರಿಗಳಿಗೇ ನೀಡಲಾಗಿತ್ತು. ಆದರೂ, ನಿರುದ್ಯೋಗಿಗಳಿಗೆ ಭತ್ತೆ ನೀಡಲು ರೂ. 1050 ಕೋಟಿ ಅಥವಾ ರೂ. 88 ಕೋಟಿಯಷ್ಟೂ ಸರಕಾರಕ್ಕೆ ಅನುಕೂಲವಿಲ್ಲ! ಭೂಮಾಲಕರ-ಬಂಡವಾಳಶಾಹಿಗಳ ಲಾಭ ಹೆಚ್ಚಿಸಲು ಸರಕಾರ ಧನಸಹಾಯ ಮಾಡುವುದಾದರೂ ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವುದಕ್ಕಾಗಲೀ, ನಿರುದ್ಯೋಗಭತ್ತೆ ಕೊಡುವುದಕ್ಕಾಗಲೀ ಸರಕಾರದೊಡನೆ ಹಣವಿಲ್ಲ!

ಪ. ಬಂಗಾಳ, ಕೇರಳ ಸರಕಾರಗಳ ಸಾಧನೆ:

1977ರಲ್ಲಿ ಅಸ್ತಿತ್ವಕ್ಕೆ ಬಂದ ಪ. ಬಂಗಾಳದ ಎಡರಂಗ ಸರಕಾರ ಮತ್ತು 1980ರಲ್ಲಿ ಅಸ್ತಿತ್ವಕ್ಕೆ ಬಂದ ಕೇರಳದ ಎಡ ಹಾಗೂ ಪ್ರಜಾಪ್ರಭುತ್ವವಾದಿ ರಂಗ ಸರಕಾರ ಮಾತ್ರ ರಾಜ್ಯಗಳ ನಿರುದ್ಯೋಗಿಗಳಿಗೆ ಸಾಂಕೇತಿಕವಾದಿಯಾದರೂ ಭತ್ತೆಯನ್ನು ಕೊಡಲು ಮೊತ್ತಮೊದಲು ಪ್ರಾರಂಭಿಸಿದವು. ಪ. ಬಂಗಾಳದ ಯೋಜನೆಯಂತೆ, 5 ವರ್ಷಗಳಿಗಿಂತಲೂ ಹೆಚ್ಚು ಕಾಲ ಉದ್ಯೋಗ ವಿನಿಮಯದಲ್ಲಿ ಹೆಸರು ದಾಖಲೆಮಾಡಿರುವ ನಿರುದ್ಯೋಗಿಗಳಿಗೆ ಸ್ವಲ್ಪ ಮಾಸಿಕ ಭತ್ತೆ ಕೊಡಲಾಗುವುದು. ನಿರುದ್ಯೋಗಸ್ಥರ ಕುಟುಂಬದ ಮಾಸಿಕ ಆದಾಯವು ತಿಂಗಳಿಗೆ ರೂ 500ಕ್ಕೆ ಮೀರದಿದ್ದರೆ ಈ ಭತ್ತೆಯನ್ನು ನೀಡಲಾಗುವುದು. ಮುಂದಿನ ವರ್ಷಗಳಲ್ಲಿ ಕೆಲಸ ಸಿಗದಿದ್ದರೆ ಮೂರು ವರ್ಷಗಳವರೆಗೆ ಈ ನಿರುದ್ಯೋಗ ಭತ್ತೆಯನ್ನು ಕೊಡಲಾಗುವುದು. ಭತ್ತೆ ಪಡೆಯುವವರು ಸರಕಾರದ ಯಾವುದಾದರೊಂದು ಯೋಜನೆಯಲ್ಲಿ ವರ್ಷಕ್ಕೆ ಕನಿಷ್ಟ 100 ದಿನಗಳಾದರೂ ಕೆಲಸ ಮಾಡಬೇಕು. ಆ ಅವಧಿಯಲ್ಲಿ ನಿರುದ್ಯೋಗಭತ್ತೆಯಲ್ಲದೆ ರೂ. 200 ವೇತನವನ್ನೂ ಕೊಡಲಾಗುವುದು.

ಕೇರಳ ಸರಕಾರದ ಯೋಜನೆಯಂತೆ, ನಿರುದ್ಯೋಗಿಗಳ ಕುಟುಂಬದ ಆದಾಯವು ವರ್ಷಕ್ಕೆ ರೂ. 4000ಕ್ಕಿಂತ ಕಡಿಮೆ ಇದ್ದರೆ, ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ಕಳೆದ ಮೂರು ವರ್ಷ ಅಥವಾ ಹೆಚ್ಚು ಕಾಲದಿಂದ ತಮ್ಮ ಹೆಸರು ದಾಖಲೆ ಮಾಡಿದ್ದರೆ, ನಿರುದ್ಯೋಗಿಗಳಿಗೆ ತಿಂಗಳಿಗೆ ಕನಿಷ್ಟ ರೂ. 50 ಭತ್ತೆಯನ್ನು ನೀಡಲಾಗುವುದು. ಇಂತಹ ಭತ್ತೆಯನ್ನು ಸಹಕಾರಿ ಸಂಘಗಳ ಮೂಲಕ ವಿತರಣೆ ಮಾಡಲಾಗುವುದು. ಕೆಲಸ ಸಿಕ್ಕಿದ ಕೂಡಲೇ ಭತ್ತೆಕೊಡುವುದನ್ನು ನಿಲ್ಲಿಸಲಾಗುವುದು. ವಿದ್ಯಾರ್ಥಿಗಳಿಗೆ ಮತ್ತು 18 ವರ್ಷದ ಕೆಳಗಿನವರಿಗೆ ಹಾಗೂ 40 ವರ್ಷದ ಮೇಲಿನವರಿಗೆ ನಿರುದ್ಯೋಗ ಭತ್ತೆಯನ್ನು ನೀಡುವುದಿಲ್ಲ. ಸದ್ಯ ಪ ಬಂಗಾಳದಲ್ಲಿ 22 ಲಕ್ಷ ಮತ್ತು ಕೇರಳದಲ್ಲಿ 13 ಲಕ್ಷ ನಿರುದ್ಯೋಗಸ್ಥರಿದ್ದು, ನಿರುದ್ಯೋಗ ಭತ್ತೆಯಿಂದ ಕನಿಷ್ಟ ಶೇ. 10ರಷ್ಟಾದರೂ ನಿರುದ್ಯೋಗಿಗಳು ಈ ಹೊಸ ಯೋಜನೆಗಳಿಂದ ಪ್ರಯೋಜನ ಹೊಂದುವರು.

ಕೇಂದ್ರ ಸರಕಾರವು ನಿರುದ್ಯೋಗ ಭತ್ತೆಯನ್ನು ಕೊಡುವುದಕ್ಕೆ ವಿರೋಧವಾಗಿರುವುದರಿಂದ, ಪ. ಬಂಗಾಳ ಮತ್ತ ಕೇರಳ ರಾಜ್ಯಗಳ ಸಂಪನ್ಮೂಲಗಳು ಬಹಳ ಸೀಮಿತವಾಗಿರುವುದರಿಂದ ನಿರುದ್ಯೋಗಭತ್ತೆ ನೀಡುವ ಯೋಜನೆಯನ್ನು ಇನ್ನಷ್ಟು ವಿಸ್ತರಿಸಲು ಅಸಾಧ್ಯವಾಗುತ್ತಿದೆ. ಆದರೂ ಸಾಂಕೇತಿಕವಾಗಿ ಇಂತಹ ಯೋಜನೆಯನ್ನು ಪ್ರಾರಂಭಿಸಿರುವುದು ಸ್ವಾಗತ. ಉದ್ಯೋಗ ಅಭಿಲಾಷಿಗಳಿಗೆ ಉದ್ಯೋಗ ನೀಡುವುದು ಸರಕಾರದ್ದೇ ಹೊಣೆ ಎಂಬ ತತ್ವವನ್ನು ಈ ಎರಡು ಸರಕಾರಗಳು ಪ್ರತಿಪಾದಿಸಿದಂತಾಗಿದೆ.

ಹೆಚ್ಚುತ್ತಿರುವ ನಿರುದ್ಯೋಗ:

ನಿರುದ್ಯೋಗಸ್ಥರಿಗೆ ಭತ್ತೆಕೊಡುವ ಬದಲು ಉದ್ಯೋಗ ಹಾಗೂ ಉತ್ಪಾದನೆ ಹೆಚ್ಚಿಸುವ ಯೋಜನೆಗಳನ್ನು ಹೆಚ್ಚುಹೆಚ್ಚಾಗಿ ಕಾರ್ಯಗತಗೊಳಿಸಬೇಕೆಂದು ಇಂದಿರಾ ಸರಕಾರವೇನೋ ಹೇಳುತ್ತಿದೆ ಆದರೆ, ಕಳೆದ 5 ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಸಾವಿರಾರು ಕೋಟಿ ಹಣ ವಿನಿಯೋಗಿಸಿದ್ದರೂ, ಒಂದೆಡೆಯಿಂದ ನಿರುದ್ಯೋಗಸ್ಥರ ಸಂಖ್ಯೆಯು ಹೆಚ್ಚುತ್ತಿದೆ, ಇನ್ನೊಂದೆಡೆಯಿಂದ ಭೂಮಾಲಕರ ಮತ್ತು ಬಂಡವಾಳಶಾಹಿಗಳ ಲಾಭ ಹೆಚ್ಚುತ್ತಿದ್ದು ಅವರ ಆಸ್ತಿ ಸಂಪತ್ತು ವಿಸ್ತರಿಸುತ್ತಲೇ ಇದೆ.

ಕೇಂದ್ರ ಕಾರ್ಮಿಕಮಂತ್ರಿ ಖಾತೆಯ ಮೂಲದಿಂದ ತಿಳಿದು ಬಂದಂತೆ 1978ರಲ್ಲಿ ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ಹೆಸರು ದಾಖಲೆಮಾಡಿಸಿದವರ ಸಂಖ್ಯೆಯು 11,96 ಮಿಲಿಯ ವಿದ್ದುದು 1979ರ ಅಂತ್ಯದಲ್ಲಿ 14.33ಕ್ಕೇರಿತು ಅಂದರೆ, ಒಂದೇ ವರ್ಷದಲ್ಲ 2 37 ಮಿಲಿಯದಷ್ಟು ನಿರುದ್ಯೋಗಸ್ಥರ ಸಂಖ್ಯೆ ಹೆಚ್ಚಾಯಿತು. ಇದೊಂದು ದೊಡ್ಡ ದಾಖಲೆ. 1980ರ ಮೊದಲ ನಾಲ್ಕು ತಿಂಗಳ ಅವಧಿಯಲ್ಲಿ, ಏಪ್ರಿಲ್ ಕೊನೆಯಲ್ಲಿ ಒಟ್ಟು ನಿರುದ್ಯೋಗಸ್ಥರ ಸಂಖ್ಯೆಯು 14.84 ಮಿಲಿಯಕ್ಕೇರಿದೆ, ಅಂದರೆ 51 ಲಕ್ಷದಷ್ಟು ಹೆಚ್ಚಾಗಿದೆ. ಹೊಸ ಉದ್ಯೋಗಾವಕಾಶಗಳು ಸ್ಥಗಿತಗೊಂಡಿವೆ ಸಂಘಟಿತ ಕ್ಷೇತ್ರದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳನ್ನು ಸೇರಿಸಿ ಒಟ್ಟು ಉದ್ಯೋಗಸ್ಥರ ಸಂಖ್ಯೆಯು ಮಾರ್ಚ್ 1979ರಲ್ಲಿ 22.1 ಮಿಲಿಯವಾಗಿದ್ದರೆ, ನಿರುದ್ಯೋಗಸ್ಥರ ಸಂಖ್ಯೆ 13 5 ಮಿಲಿಯದಷ್ಟಾಗಿತ್ತು. ಅಂದರೆ ಶೇ. 60 ರಷ್ಟಾಗಿತ್ತು! ನಿರುದ್ಯೋಗಿ ಮಹಿಳೆಯರ ಸಂಖ್ಯೆಯೂ ಕಳೆದ ವರ್ಷದಲ್ಲಿ 1 67 ಮಿಲಿಯದಿಂದ 1.90 ಮಿಲಿಯಕ್ಕೇರಿದೆ. ನಿರುದ್ಯೋಗಿಗಳಲ್ಲಿ ಅರ್ಧಾಂಶದಷ್ಟು ಜನರು ಮೆಟ್ರಿಕ್ ಪಾಸಾದವರು, ಪದವೀಧರರು, ಸ್ನಾತಕೋತ್ತರ ಪದವೀಧರರು. ಕಲಿಯುಲಿಕ್ಕೇ ಹಲವಾರು ವರ್ಷಗಳಲ್ಲಿ ಸಾಕಷ್ಟು ಖರ್ಚು ಮಾಡಬೇಕಾಗಿದ್ದು, ಕಲಿತಮೇಲೂ 5 ವರ್ಷಗಳವರೆಗೂ ಕೆಲಸ ಇಲ್ಲದೆ ಉಳಿಯಬೇಕೆಂದರೆ, ಎಂತಹ ದುಃಸ್ಥಿತಿ ಬಂದೊದಗಿದೆ ಎಂದು ತಿಳಿಯಬಹುದು ಇಷ್ಟೊಂದು ಬೃಹತ್ ಪ್ರಮಾಣದ ಯುವಕರಿಗೆ ಭವಿಷ್ಯ ಶೂನ್ಯವಾಗಿದೆ. ಅವರು ಸ್ವಲ್ಪವಾದರೂ ಚೇತರಿಸಿಕೊಂಡಿರಲು ನಿರುದ್ಯೋಗ ಭತ್ತೆಯನ್ನಾದರೂ ಕೊಡಬೇಡವೆ?

ನಗರಗಳಲ್ಲಿ ಹೆಚ್ಚುತ್ತಿರುವ ನಿರುದ್ಯೋಗ, ಹೆಚ್ಚುತ್ತಿರುವ ವಿದ್ಯಾವಂತರ ನಿರುದ್ಯೋಗ, ಮಹಿಳೆಯರು ಕೆಲಸಕ್ಕೆ ಸೇರಬೇಕಾದ ಅನಿವಾರ್ಯತೆ, ಸಂಘಟಿತ ಕ್ಷೇತ್ರವು ನಿರುದ್ಯೋಗಸ್ಥರಿಗೆ ಉದ್ಯೋಗ ದೊರಕಿಸಲು ಅಸಮರ್ಥವಾಗಿರುವುದು, ಗ್ರಾಮೀಣ ನಿರುದ್ಯೋಗ ಹಾಗೂ ಅರೆಉದ್ಯೋಗ, ಇತ್ಯಾದಿ ಸಮಸ್ಯೆಗಳು ತೀವ್ರ ಆರ್ಥಿಕ ದುಃಸ್ಥಿತಿಯನ್ನು ಸೂಚಿಸುವುವು. ಭೂಮಾಲೀಕ-ಬಂಡವಾಳಶಾಹಿ ಆರ್ಥಿಕ ಪದ್ಧತಿಯಲ್ಲಿ ಇಂತಹ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಸಿಗಲಾರದು. ಅಸಂಖ್ಯಾತ ನಿರುದ್ಯೋಗಿಗಳಿಗೆ ಸಾಂಕೇತಿಕವಾದ ಭತ್ತೆಯೂ ಸಿಗಲಾರದು.

○

ತ್ರಿಪುರಾಕ್ಕೆ ಸಹಾಯ

ತ್ರಿಪುರಾ ಪರಿಹಾರ ನಿಧಿಗೆ ಕೆ.ಜಿ.ಎಫ್.ನಲ್ಲಿ ರೂ. 657.00; ಶಿಡ್ಲಘಟ್ಟದಲ್ಲಿ ರೂ. 60.00; ಬೆಂಗಳೂರಿನ ಕೃಷ್ಣರಾಜಪುರದಲ್ಲಿ ರೂ. 380.00 ಸಂಗ್ರಹವಾಗಿದೆ.

○

ಕೇರಳ ಸರ್ಕಾರದ ಮೊದಲ ಆರು ತಿಂಗಳು

ಇ. ಕೆ. ನಯನಾರ್

ಎಡ ಮತ್ತು ಪ್ರಜಾಪ್ರಭುತ್ವವಾದಿ ಸರ್ಕಾರವು ಅಧಿಕಾರಕ್ಕೆ ಬಂದು ಆರು ತಿಂಗಳು ಕಳೆದಿವೆ. ಒಂದು ಸರ್ಕಾರದ ಕಾರ್ಯವನ್ನು ಅಳೆಯಲು ಈ ಅವಧಿ ತುಂಬ ಕಡಿಮೆಯದಾದರೂ, ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗದ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಮತ್ತು 1980-81ರ ಮುಂಗಡಪತ್ರದಲ್ಲಿ ನೀಡಿದ್ದ ಭರವಸೆಗಳನ್ನು ಜಾರಿಮಾಡಲು ನಾವು ಪ್ರಾಮಾಣಿಕ ಪ್ರಯತ್ನ ನಡೆಸಿದ್ದೇವೆಯೇ ಎಂಬುದನ್ನು ಪರಿಶೀಲಿಸುವುದು ಯೋಗ್ಯ.

ಮುಂಗಡಪತ್ರದ ಭರವಸೆಗಳ ವಿಚಾರ ಹೇಳುವುದಾದರೆ, ಅದರಲ್ಲಿ ಘೋಷಿಸಲಾಗಿದ್ದ ಎಲ್ಲ 33 ಅಂಶಗಳ ಸಾಮಾಜಿಕ ಕಲ್ಯಾಣ ಕ್ರಮಗಳನ್ನು ಜಾರಿಮಾಡಿದ್ದೇವೆಂಬುದನ್ನು ಹೇಳಲು ಸಂತೋಷವಾಗುತ್ತದೆ.ಅವಧಿ ನಿಶ್ಚಿತವಾದ ಕಾರ್ಯಕ್ರಮದ ಜಾರಿಯಲ್ಲಿ, ಕೇರಳದ ಆಡಳಿತದ ಇತಿಹಾಸದಲ್ಲೇ ಇದು ಒಂದು ದಾಖಲೆಯಾಗಿದೆ

ಇದರ ಅರ್ಥ ನಾವು ಯಾವುದೇ ತಪ್ಪುಗಳನ್ನು ಮಾಡಿಲ್ಲ ಅಥವಾ ನಮ್ಮಲ್ಲಿ ಯಾವ ದೌರ್ಬಲ್ಯಗಳೂ ಇಲ್ಲ ಎಂದಲ್ಲ ಅಂಥವೇನೋ ಇದ್ದವು. ಆದರೆ ಈ ತಪ್ಪುಗಳನ್ನು ಮತ್ತು ದೌರ್ಬಲ್ಯಗಳನ್ನು ಸರಿಪಡಿಸಿಕೊಳ್ಳಲು ನಿಷ್ಠೆಯಿಂದ ಪ್ರಯತ್ನಿಸಿ ನಮ್ಮ ಘೋಷಿತ ಕಾರ್ಯಕ್ರಮ ಮತ್ತು ಭರವಸೆಗಳನ್ನು ಈಡೇರಿಸಲು ಮುನ್ನಡೆಯುವುದು ನಮ್ಮ ಗುರಿಯಾಗಿದೆ.

ಕಲ್ಯಾಣ ಕ್ರಮಗಳು :

ಕೆಲವು ಟೀಕಾಕಾರರು ನಮ್ಮ ಸರ್ಕಾರವನ್ನು "ಪಿಂಚಣಿ ಸರ್ಕಾರ" ಎಂದು ಕರೆಯುತ್ತಾರೆ. ಆದರೆ ಹಾಗೆ ಕರೆಸಿಕೊಳ್ಳಲು ನಾನು ಹೆಮ್ಮೆ ಪಡುತ್ತೇನೆ. ಶತಮಾನಗಳಿಂದ ಶೋಷಣೆಗೊಳಗಾದ ದುರ್ಬಲವರ್ಗಗಳಿಗಾಗಿ ನಾವು ಜಾರಿ ಮಾಡಿರುವ ಕ್ರಮಗಳನ್ನು ನಮ್ಮ ವಿಮರ್ಶಕರು ಒಪ್ಪಿಕೊಂಡಿದ್ದಾರೆಂದು ಇದರ ಅರ್ಥ,

ಕೃಷಿ ಕಾರ್ಮಿಕರ ವಿಶ್ರಾಂತಿವೇತನ ಕ್ರಮ ಎರಡು ಲಕ್ಷ ಜನರಿಗೆ ಪ್ರಯೋಜನಕಾರಿಯಾಗಿದೆ. ಇಂಥ ಮಾದರಿಯ ಮತ್ತು ಇಷ್ಟು ಅಗಾಧದ ಕ್ರಮವನ್ನು ನಮ್ಮ ದೇಶದಲ್ಲೇ ಹಿಂದೆ ಯಾರೂ ಪ್ರಯತ್ನಿಸಿರಲಿಲ್ಲ. ನಮ್ಮ ಮುಂಗಡಪತ್ರವಾದ ಆರುವಾರಗಳಲ್ಲೇ ನಾವು ಇದನ್ನು ಜಾರಿ ಮಾಡಲಾರಂಭಿಸಿದೆವು. ಇದೇ ಒಂದು ದಾಖಲೆಯಾಗಿದೆ. ಮುಂಗಡ ಪತ್ರದಲ್ಲಿ ಇದಕ್ಕಾಗಿ 17.5 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಸಿನಿಮಾ ನಟರು, ಸರ್ಕಸ್ ಕಲಾವಿದರು ಮತ್ತು ಪತ್ರಕರ್ತರ ವಿಶ್ರಾಂತಿ ವೇತನಗಳೂ ಸೇರಿದಂತೆ ಇನ್ನಿತರ ಎಂಟು ವಿಶ್ರಾಂತಿವೇತನ ಯೋಜನೆಗಳಿವೆ.

ನಮ್ಮ ಕಾರ್ಯಕ್ರಮದ ಇನ್ನೊಂದು ಮುಖ್ಯ ಅಂಗವೆಂದರೆ ನಿರುದ್ಯೋಗ ಪರಿಹಾರ ಯೋಜನೆ. ಈ ವರ್ಷದ ಮುಂಗಡ ಪತ್ರದಲ್ಲಿ ಇದಕ್ಕಾಗಿ ಐದು ಕೋಟಿ ರೂಪಾಯಿಗಳನ್ನು ಮೀಸಲಾಗಿಡಲಾಗಿದೆ. ಈ ವರ್ಷದ ಆಗಸ್ಟ್ 15 ರಿಂದ ಯೋಜನೆಯನ್ನು ಜಾರಿ ಮಾಡಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದನ್ನು ಅನುತ್ಪಾದನೀಯ ಮತ್ತು ಸೋಮಾರಿತನಕ್ಕೆ ಕಾಣಿಕೆ ಎಂದು ಮೂಗುಮುರಿಯುವವರು ಇದ್ದಾರೆ.

ಆದರೆ ನಾನು ಇದನ್ನು ಒಪ್ಪುವುದಿಲ್ಲ. ಮುಂದಿನ ಭವಿಷ್ಯದಲ್ಲಿ ಉದ್ಯೋಗದ ಹಲವಾರು ಅವಕಾಶಗಳನ್ನು ಒದಗಿಸುವ ಸಾಧ್ಯತೆ ಇದ್ದಿದ್ದರೆ ಆ ಟೀಕೆ ನಿಜವಾಗಿರುತ್ತಿತ್ತು. ನಮ್ಮ ಯೋಜನೆಗಳು ಆರಂಭವಾದ ಮೊದಲ ದಿನಗಳಿಂದಲೂ ನಿರುದ್ಯೋಗ ಹೆಚ್ಚುತ್ತಿರುವಂಥ ಸನ್ನಿವೇಶದಲ್ಲಿ, ನಮ್ಮ ಯುವಕರನ್ನು ನಿರಾಶೆಗೆನೂಕಿ ಬೇಡುವಂತೆ ಮಾಡುವುದು ಸರಿಯಲ್ಲ ಎಂದು ನಾನು ಭಾವಿಸುತ್ತೇನೆ. ಈ ಯೋಜನೆಯನ್ನು ಇತರ ಮೂಲಗಳ ಸಹಾಯದೊಡನೆ ಸ್ವಂತ ಉದ್ಯೋಗಕ್ಕಾಗಿ ನಮ್ಮ ಸಾಕಷ್ಟು ಯುವಕ-ಯುವತಿಯರು ಬಳಸಿಕೊಳ್ಳುವರೆಂಬ ನಂಬಿಕೆ ನನಗಿದೆ.

ನಮ್ಮ ರಾಜಕೀಯ ಪಕ್ಷಗಳು, ಸಾಮೂಹಿಕ ಸಂಘಟನೆಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳು ಎಲ್ಲವೂ ಒಟ್ಟಿಗೆ ಸೇರಿ ಈ ಯೋಜನೆಯನ್ನು ಉತ್ಪಾದನೀಯವಾದಿ ಮತ್ತು ಪ್ರಯೋಜನಕಾರಿಯಾಗಿ ಮಾಡಬೇಕು, ತಮಗೆ ಸಹಾಯ ನೀಡುತ್ತಿರುವ ಸಮಾಜದ ಬಗ್ಗೆ ತಮಗಿರುವ ಹೊಣೆಗಾರಿಕೆಯನ್ನು ನಮ್ಮ ಯುವಜನರು ಮರೆಯುವುದಿಲ್ಲವೆಂಬ ನಂಬಿಕೆ ನನಗಿದೆ,

ಹೀಗೆಂದಮಾತ್ರಕ್ಕೆ, ಯೋಜನೆ ಮತ್ತು ಕೈಗಾರಿಕೀಕರಣದ ಬಗ್ಗೆ ನಾವೇನೂ ಯೋಚಿಸುತ್ತಿಲ್ಲ ಎಂದರ್ಥವಲ್ಲ. 50,000 ಜನರಿಗೆ ಉದ್ಯೋಗಾವಕಾಶ ಕಲ್ಪಿಸುವ 55ಕೋಟಿ ರೂಪಾಯಿಗಳ ಯೋಜನೆಯೊಂದನ್ನು ನಾವೀಗಾಗಲೇ ಶಾಸಕಾಂಗದ ಮುಂದೆ ಇಟ್ಟಿದ್ದೇವೆ.

ಯೋಜನೆಯ ಬಗ್ಗೆ ದೃಷ್ಟಿಕೋನ:

ಯೋಜನೆ ಒಂದು ಗಂಭೀರವಾದ ವಿಚಾರ. ನಮ್ಮ ಯೋಜನೆಗಳಿಗೆ ಪುನರ್‌ನವೀಕರಣ ಮತ್ತು ಪ್ರಜಾಪ್ರಭುತ್ವವಾದಿ ಚಲನೆ ಬೇಕಾಗಿದೆ ಎಂದು ನನ್ನ ನಂಬಿಕೆ. ನಾನು ಬಂಡವಾಳಶಾಹಿ ಯೋಜನೆಯ ದುಷ್ಪರಿಣಾಮಗಳನ್ನು ಕುರಿತು ಹೇಳುವುದಿಲ್ಲ. ಏಕೆಂದರೆ, ಅದರ ಬಿಕ್ಕಟ್ಟಿನ ನಡುವೆ ಸಿಕ್ಕಿರುವ ನಮಗೆ ಅದರ ವಿವರಣೆ ಅಗತ್ಯವಿಲ್ಲ. ಈಗ ಹೆಚ್ಚು ಹೆಚ್ಚು ಜನರು ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯದ ಬಗ್ಗೆ ಸಂತೃಪ್ತಿಗೊಳ್ಳುತ್ತಿದ್ದಾರೆಂಬ ಭರವಸೆ ನನಗಿದೆ.

ಆದರೆ ಯಾವುದೇ ಯೋಜನಾ ವ್ಯವಸ್ಥೆ ಪರಿಣಾಮಕಾರಿಯಾಗಬೇಕಾದರೆ, ಅದು ಯೋಜನೆಗಳ ರಚನೆ ಮತ್ತು ಜಾರಿ ಎರಡರಲ್ಲಿಯೂ ಕೆಳಹಂತದಿಂದ ಆರಂಭವಾಗಬೇಕು. ಈ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ರಾಜ್ಯದ ಯೋಜನಾ ಘಟಕಕ್ಕೆ ವಿಶಿಷ್ಟ ಪಾತ್ರವಿದೆ. ಆದ್ದರಿಂದ ಬರೀ ಸಲಹೆಗಳನ್ನು ಕೊಡುವಂಥ ಯೋಜನಾ ಅಧಿಕಾರ ಸಾಲುವುದಿಲ್ಲ ಎಂದು ನಾವು ಭಾವಿಸಿದ್ದೇವೆ. ಹೊಸ ಗುರಿಗಳನ್ನು ಮುಟ್ಟಲು ನಾವು ಯೋಜನಾಮಂಡಲಿಯನ್ನು ಪುನರ್ ರಚಿಸಿದ್ದೇವೆ. ನಮ್ಮ ಆರನೇ ಯೋಜನೆ ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳನ್ನು ರೂಪಿಸುವುದರಲ್ಲಿ ಈ ಮಂಡಲಿ ತನ್ನ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸುತ್ತದೆಂದು ನಾನು ನಂಬಿದ್ದೇನೆ,

ಇದರ ಜೊತೆಗೆ ಈಗಾಗಲೇ ಚುನಾಯಿತವಾಗಿರುವ ಪಂಚಾಯತಿಗಳ ಜೊತೆ, ಆಯ್ಕೆಗೊಂಡ ಜಿಲ್ಲಾ ಸಮಿತಿಗಳೂ ಅಪಾರ ಅಧಿಕಾರಗಳನ್ನು ಮೊದಲಬಾರಿಗೆ ಕೈಲಿಟ್ಟುಕೊಂಡು 1981ರ ಜನವರಿ ಒಂದರಿಂದ ಕಾರ್ಯಾರಂಭ ಮಾಡಲಿವೆ. ಯೋಜನೆಯ ರಚನೆ ಮತ್ತು ಜಾರಿಯಲ್ಲಿ ಇವು ಪ್ರಜಾಸತ್ತೀಕರಣ ಮತ್ತು ವಿಕೇಂದ್ರೀಕರಣದ ತಳಹದಿಯಾಗಿ ರೂಪುಗೊಳ್ಳಲಿವೆ.

ಇದೇ ಸಮಯದಲ್ಲಿ, ಈ ವರ್ಷದ ಯೋಜನೆಯ ಬಗ್ಗೆಯೂ ನಾವು ತುಂಬಾ ಚಟುವಟಿಕೆಯಿಂದಿದ್ದೇವೆ. ನಾವು ಅಧಿಕಾರ ವಹಿಸಿಕೊಂಡಾಗ ಆವರ್ತಯೋಜನೆ ಜಾರಿಯಲ್ಲಿತ್ತು. 1980-81ಕ್ಕೆ 240 ಕೋಟಿ ರೂ.ಗಳ ಯೋಜನೆ ಆಗಲೇ ಸಿದ್ಧವಾಗಿತ್ತು. ಯೋಜನೆಯು ಬರೀ ಅಧಿಕಾರಿ ಹಂತದಲ್ಲಿ ರೂಪುಗೊಳ್ಳದೆ ರಾಜಕೀಯ ಹಂತದಲ್ಲಿ ಸಿದ್ಧವಾಗಬೇಕೆಂದು ನಾವು ಒತ್ತಾಯಿಸಿ 264 ಕೋಟಿ ರೂ.ಗಳ ಯೋಜನೆಯನ್ನು ಮುಂದಿಟ್ಟೆವು. ಈ ವೇಳೆಗೆ ಕೇಂದ್ರ ಸರ್ಕಾರವು ಆವರ್ತಯೋಜನೆಯನ್ನು ಕೈಬಿಡಲು ನಿರ್ಧರಿಸಿ, ಪಂಚವಾರ್ಷಿಕ ಯೋಜನೆಯನ್ನು ಮತ್ತೆ ತಂದು, ಆರನೇ ಪಂಚವಾರ್ಷಿಕ ಯೋಜನೆಯನ್ನು ಪ್ರಕಟಿಸಿತು,

ಆರನೇ ಪಂಚವಾರ್ಷಿಕ ಯೋಜನೆಯ ಅಂಗವಾಗಿ, ಮೊದಲ ವರ್ಷದ 291 ಕೋಟಿ ರೂ. ಗಳ ಯೋಜನೆಯನ್ನು ನಾವು ಸಲ್ಲಿಸಿದ್ದಾಗಿದೆ. ಈ ಬಗ್ಗೆ ಆಗಸ್ಟ್‌ನಲ್ಲಿ ಕೇಂದ್ರದ ಜೊತೆ ಚರ್ಚೆ ನಡೆಯಲಿದೆ. ಜೊತೆಗೆ ನಮ್ಮ ಆರನೇ ಪಂಚವಾರ್ಷಿಕ ಯೋಜನೆಯ ಕೆಲಸ ಈಗಾಗಲೇ ಶುರುವಾಗಿದೆ.

65 ಕೋಟಿ ರೂ. ಗಳ ನಾರು ಅಭಿವೃದ್ಧಿಯೋಜನೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ಯೋಜನೆ ಇವುಗಳನ್ನು ನಾವೀಗಾಗಲೇ ಕೇಂದ್ರಕ್ಕೆ ಒಪ್ಪಿಸಿದ್ದೇವೆ,

ಅಸಮಾನತೆಯನ್ನು ಸರಿಪಡಿಸುವಿಕೆ:

ಕೇರಳದ ಆರ್ಥಿಕ ರಚನೆಯ ಮುಖ್ಯ ದೌರ್ಬಲ್ಯವೆಂದರೆ, ಕೇಂದ್ರದಿಂದ ಕಳೆದ ವರ್ಷದ ತನಕ 381.74 ಕೋಟಿ ರೂ.ಗಳನ್ನು ಸರ್ಕಾರಿ ವಲಯದಲ್ಲೇ ಹೂಡಲಾಗಿತ್ತು ಎಂಬ ಅಂಶವನ್ನು ಈ ಸಂದರ್ಭದಲ್ಲಿ ಸೂಚಿಸಬಹುದು. ಈ ಅಸಮಾನತೆಯನ್ನು ಸರಿಪಡಿಸುವ ತನಕ ಕೇರಳದ ಹಿಂದುಳಿದಿರುವಿಕೆ ಮತ್ತು ನಿರುದ್ಯೋಗ ಪರಿಸ್ಥಿತಿಗಳು ಹಾಗೇ ಮುಂದುವರೆಯುತ್ತವೆ. ಆದ್ದರಿಂದ, ರಾಜ್ಯಸರ್ಕಾರ ಮತ್ತು ರಾಜಕೀಯ ಪಕ್ಷಗಳು, ಹೊಸ ಯೋಜನೆಗಳನ್ನು ಮಂಜೂರು ಮಾಡುವಂತೆ ಕೇಂದ್ರಕ್ಕೆ ವಿನಂತಿಸಿವೆ.

ಇವುಗಳಲ್ಲಿ ಅಗರಬತ್ತಿ, ಕ್ಯಾಪ್ರೊಲಾಕ್ಟಮ್ ಯೋಜನೆಗಳು, ರೈಲ್ವೆ ಕೋಚ್ ಫ್ಯಾಕ್ಟರಿ, ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಒಂದು ಘಟಕ, ನೌಕಾ ಅಕಾಡೆಮಿ ಮತ್ತು ನೌಕಾ ಆರ್ಮಮೆಂಟ್ ಘಟಕಗಳು ಸೇರಿವೆ. ರೈಲ್ವೆ ವಿಚಾರದಲ್ಲಿ ಆಗಿರುವ ನಿರ್ಲಕ್ಷ್ಯವನ್ನೂ ಕೇಂದ್ರದ ಗಮನಕ್ಕೆ ತಂದಿದ್ದೇವೆ.

ತುಂಬಾದ ಬಾಹ್ಯಾಕಾಶ ಸಂಶೋಧನಾ ಕೇಂದ್ರಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆಯೂ ನಮ್ಮ ಸರ್ಕಾರ ಆಸಕ್ತಿ ತಳೆದಿದೆ. ಇವೆಲ್ಲದರಲ್ಲಿ ವಿರೋಧ ಪಕ್ಷಗಳ ಬೆಂಬಲವನ್ನು ಗಳಿಸುವುದು ನಮಗೆ ಸಾಧ್ಯವಾಗಿದೆ,

ಯೋಜನೆ ಮತ್ತು ಕೈಗಾರಿಕೀಕರಣದ ವಿಚಾರದಲ್ಲಿ ನಾವು ವಾಸ್ತವವಾದ ಮತ್ತು ಆಶಾದಾಯಕವಾದ ದೃಷ್ಟಿಕೋನವನ್ನು ಅನುಸರಿಸುತ್ತಿದ್ದೇವೆಂಬುದನ್ನು ಸ್ಪಷ್ಟಪಡಿಸಲು ಇವುಗಳನ್ನು ನಾನು ಹೇಳುತ್ತಿದ್ದೇನೆ.

ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗ ಮತ್ತು ವಿರೋಧಪಕ್ಷಗಳ ನಡುವೆ ಇರುವ ಸಹಕಾರವು,ಕೋಕೋ ರಬ್ಬರ್, ಗೋಡಂಬಿ ಮತ್ತು ಕೊಬ್ಬರಿಗಳನ್ನು ಆಮದುಮಾಡಿಕೊಳ್ಳುವ ಕೇಂದ್ರದ ನಿರ್ಧಾರಕ್ಕೆ ಒಕ್ಕೊರಲಿನ ವಿರೋಧವನ್ನು ಪ್ರದರ್ಶಿಸಿದಾಗ ವ್ಯಕ್ತವಾಯಿತು. ಕೇಂದ್ರದ ಈ ಆಮದು ನೀತಿಯು ಕೇರಳದ ಗ್ರಾಮೀಣ ಆರ್ಥಿಕತೆಯನ್ನೇ ಇಡಿಯಾಗಿ ನಾಶಮಾಡುತ್ತದೆ,

ಕೇಂದ್ರವು ಸದ್ಯದಲ್ಲಿ ಅನುಸರಿಸುತ್ತಿರುವ ಆರ್ಥಿಕ ನೀತಿಯಿಂದ, ಬೆಲೆಗಳು ವಿಪರೀತ ಏರಿ, ಇಡೀ ಆರ್ಥಿಕತೆಯನ್ನೇ ಬಿಕ್ಕಟ್ಟಿನ ಹೊಸ ಆಳಗಳಿಗೆ ನೂಕುತ್ತಿದೆ. ಈ ಹಿನ್ನೆಲೆಯಲ್ಲಿಯೂ, ಅಗತ್ಯ ಗ್ರಾಹಕ ವಸ್ತುಗಳನ್ನು 12,000 ವಿತರಣಾ ಕೇಂದ್ರಗಳ ಮೂಲಕ, ಬಹಿರಂಗ ಮಾರುಕಟ್ಟೆಯ ಬೆಲೆಗಳಿಗಿಂತಲೂ ಕಡಿಮೆ ಬೆಲೆಯಲ್ಲಿ ಒದಗಿಸಲು ನಾವು ಪ್ರಯತ್ನಿಸಿದ್ದೇವೆ.

ಎಲ್ಲ ರಂಗಗಳಲ್ಲಿ ಸುಧಾರಣೆ :

ಭೂಸುಧಾರಣೆಗಳನ್ನು ಜಾರಿಮಾಡುವುದರಲ್ಲಿ ನಾವು ಮುನ್ನಡೆದಿದ್ದೇವೆ ಮತ್ತು ಶಾಸನದಲ್ಲಿದ್ದ ಕೆಲವು ಕೊರತೆಗಳನ್ನು ಅಳಿಸಿದ್ದೇವೆ.

ಶಾಲಾವರ್ಷವು ಶಾಂತಿಯುತವಾಗಿ ಆರಂಭವಾಗಿ, ವಿದ್ಯಾರ್ಥಿಗಳ ಅನೇಕ ಸಮಸ್ಯೆಗಳು ನಿವಾರಣೆಯಾದ ಕೀರ್ತಿ ಮಂತ್ರಿಮಂಡಲಕ್ಕೆ ಸಲ್ಲುತ್ತದೆ. ವಿದ್ಯೆಯ ಮಟ್ಟವನ್ನು ಹೆಚ್ಚಿಸಲು ಮತ್ತು ಅದಕ್ಕೆ ಸಾರ್ಥಕ ದೃಷ್ಟಿಕೋನವನ್ನು ಕೊಡಲು ನಾವು ಗಮನ ಹರಿಸುತ್ತಿದ್ದೇವೆ,

ಕಾರ್ಮಿಕರಂಗದಲ್ಲೂ ಗಮನಾರ್ಹ ಸುಧಾರಣೆಗಳು ಕಂಡುಬಂದಿವೆ,

ಸರ್ಕಾರದ ಚಟುವಟಿಕೆಯ ಎಲ್ಲ ರಂಗಗಳಲ್ಲಿ ಮತ್ತು ಜನತೆಯ ಜೀವನದಲ್ಲಿ ಸುಧಾರಣೆ ಕಾಣುತ್ತಿದೆ, ಇದು ಯಾವ ಮಂತ್ರಿಮಂಡಲವೂ ಹೆಮ್ಮೆ ಪಡಬಹುದಾದ ಸಾಧನೆ ಎಂದು ನನಗನಿಸುತ್ತದೆ,

ನಮ್ಮ ಸರ್ಕಾರದ ಮೊದಲ ತಿಂಗಳುಗಳಲ್ಲಿ ವಿರೋಧ ಪಕ್ಷಗಳ ಕೂಗೆಂದರೆ, ಕಾನೂನು ಮತ್ತು ಶಿಸ್ತು ಇಲ್ಲದಿರುವುದರಿಂದ ಕೇಂದ್ರ ಮಧ್ಯೆ ಪ್ರವೇಶಿಸಲಿ ಎಂಬುದು. ಈಗ ಈ ಕೂಗು "ಮಾರ್ಕ್ಸ್‌ವಾದಿ ಹಿಂಸೆ"ಎಂದು ಬದಲಾಗಿದೆ. ಆಶ್ಚರ್ಯವೆಂದರೆ ಈ "ಮಾರ್ಕ್ಸ್‌ವಾದಿ ಹಿಂಸೆ"ಗೆ ಬಲಿಯಾದವರು ಮಾರ್ಕ್ಸ್‌ವಾದಿಗಳೇ, ಇದನ್ನು ಬಯಲುಮಾಡಿದಾಗ ಆಪಾದನೆ "ಮಾರ್ಕ್ಸ್‌ವಾದಿ ದಬ್ಬಾಳಿಕೆ" ಎಂದು ಬದಲಾಯಿತು, ಆದರೆ ಜನತೆಯ ನಿಜಜೀವನದಲ್ಲಿ ಈ ಆಪಾದನೆಗಳಿಗೆ ಆಧಾರವಿಲ್ಲ,

ದೇಶದ ಸಮಸ್ಯೆಗಳಿಗೆ ಕೇಂದ್ರವು ಅನುಸರಿಸುತ್ತಿರುವ ತಪ್ಪು ಆರ್ಥಿಕ ನೀತಿಗಳೇ ಕಾರಣ, ನಮ್ಮ ಆರ್ಥಿಕ ನೀತಿಗಳು ಮತ್ತು ಯೋಜನೆಗಳಿಗೆ ಹೊಸ ದಿಕ್ಕನ್ನು ತೋರಿಸುವ ದೊಡ್ಡ ಕೆಲಸದಲ್ಲಿ ಭಾಗವಹಿಸುವಂತೆ ನಾನು ಎಲ್ಲ ರಾಜಕೀಯ ಪಕ್ಷಗಳಿಗೆ ಮತ್ತು ಇತರರಿಗೆ ಮನವಿ ಮಾಡುತ್ತೇನೆ,

●

ರಾಯಚೂರು ಜಿಲ್ಲಾ ಲಾರಿ ಕಾರ್ಮಿಕರ ಹೋರಾಟ

(ವಿಶೇಷ ವರದಿಗಾರರಿಂದ)

ರಾಯಚೂರು ಜಿಲ್ಲೆಯಲ್ಲಿ ಲಾರಿ ಕಾರ್ಮಿಕರು 800ಕ್ಕಿಂತಲೂ ಹೆಚ್ಚು ಜನ 300 ಲಾರಿ ವಾಹನಗಳ ಮೇಲೆ ಚಾಲಕರಾಗಿ ಮತ್ತು ಕ್ಲೀನರ್‌ಗಳಾಗಿ ಹಗಲು ಇರುಳು ದುಡಿಯುತ್ತಿದ್ದಾರೆ. ಜೂನ್ 25 ಕ್ಕಿಂತ ಮುಂಚೆ, 3 ವರ್ಷಗಳ ಹಿಂದೆ ಎರಡು ಸಂಘಟನೆಗಳು ಹುಟ್ಟಿಕೊಂಡು ಆವಾಗಿನ ಮುಖಂಡರು ಲಾರಿ ಕಾರ್ಮಿಕರನ್ನು ಮೋಸಮಾಡಿ ಮಾಲಕರ ಪರವಾಗಿ ಹಾಗು ಹಣವನ್ನು ದೋಚಿ ಜನತೆಯಲ್ಲಿ ಸಂಘಟನೆಯ ಬಗ್ಗೆ ಜಿಗುಪ್ಸೆಯ ಭಾವನೆಯ ಬೀಜವನ್ನು ಬಿತ್ತಿದ್ದರು.

ಲಾರಿ ಕಾರ್ಮಿಕರು ಒಂದು ಸ್ಥಳದಲ್ಲಿ ಸಿಗದೆ ಚೆಲ್ಲಾಪಿಲ್ಲಿಯಾಗಿ ಕೆಲಸ ಮಾಡುತ್ತಿರುವ ಅಸಂಘಟಿತ ವಾತಾವರಣದ ಸಾರಿಗೆ ವ್ಯವಸ್ಥೆಯಲ್ಲಿರುತ್ತಾರೆ. ಆದರೆ ಜೂನ್ ಮೊದಲ ವಾರದಲ್ಲಿ ಕೆಲವು ಪ್ರಾದೇಶಿಕ ಭಾವನೆಗಳಿಂದ ಕಲಹವು ಲಾರಿ ಚಾಲಕರಲ್ಲಿ ಪ್ರಾರಂಭವಾಗಿ ಸಂಘಟನೆಯನ್ನು ಕಟ್ಟಿಕೊಳ್ಳುವ ಭಾವನೆಯು ಮತ್ತೆ ಬರಹತ್ತಿತ್ತು.

ಜೂನ್ 25, 80 ರಂದು ನಗರದ ಸಿ.ಐ.ಟಿ.ಯು. ನೇತೃತ್ವದಲ್ಲಿ ತಾವು ಸಂಘಟನೆಯಾಗಲು ಇಷ್ಟಪಟ್ಟಿರುವದರಿಂದ ಪ್ರಾದೇಶಿಕ ಭಾವನೆಯ ಅಪಾಯ, ಸಂಘಟನೆಯ ಮಹತ್ವ, ಸಮಸ್ಯೆಗಳ ಕಾರಣ, ಪರಿಹಾರ, ಸಿ ಐ ಟಿ.ಯು.ನ ಧ್ಯೇಯಧೋರಣೆ ಮುಂತಾದವುಗಳನ್ನು ಲಾರಿ ಕಾರ್ಮಿಕರಿಗೆ ವಿವರಣೆಯನ್ನು ಕೊಟ್ಟು ಶಕ್ತಿಯುತವಾಗಿ ಹೋರಾಟ ಮಾಡಲು ನಾಂದಿಯು ದಿನವಾಯಿತು. ರಾಯಚೂರಿನ ಗಂಜರಸ್ತೆಯಲ್ಲಿ ಆಫೀಸು ಮಾಡಿದ ಮೇಲೆ ದಿನವು ಹೆಚ್ಚು ಹೆಚ್ಚು ಕಾರ್ಮಿಕರು ಬರಲು ಪ್ರಾರಂಭವಾಗಿ ಸಂಘಟನೆಯ ಅವಶ್ಯಕತೆಯ ಬಗ್ಗೆ ದಿನಾಲು ಸಭೆಗಳು ನಡೆಯಹತ್ತಿದವು.

ಜೂನ್ 30ರಂದು, ವೇತನದ ಹೆಚ್ಚಳ ಚಾಲಕರಿಗೆ ರೂ. 150 ಯಿಂದ 350ರವರೆಗೆ ಕ್ಲೀನರ್ಸ್‌ಗಳಿಗೆ 40 ರೂ. ಯಿಂದ 175ರವರೆಗೆ ದಿನ ಭತ್ಯ, ಕೆಲಸದ ಭದ್ರತೆ, ಪ್ರತಿ ಲಾರಿಗೆ ಇಬ್ಬರಂತೆ ಚಾಲಕ ಮತ್ತು ಕ್ಲೀನರ್ಸ್ ಗಳಂತೆ ನೇಮಕಾತಿ, ಬೋನಸ್, ಸಮವಸ್ತ್ರ ಮುಂತಾದ 10 ಬೇಡಿಕೆಯನ್ನಿಟ್ಟು ಲಾರಿ ಮಾಲಕರಿಗೆ ಅರ್ಪಿಸಿ ಜುಲೈ 14 ರಂದು ಹೋರಾಡಲು ಕರೆ ಕೊಡಲಾಯಿತು. ಲಾರಿ ಮಾಲಕರಿಗೆ ದಿನಗಳನ್ನು ಮುಂದೂಡುವುದು ಬೇಕಾಗಿರುವುದರಿಂದ ಜುಲೈ 20ರಂದು ನಮ್ಮ ಸಂಘಟನೆಗೆ ಬೇಡಿಕೆಗಳ ಬಗ್ಗೆ ಮಾತುಕತೆಯ ದಿನಾಂಕವನ್ನು ಸೂಚಿಸುವದಾಗಿ ತಿಳಿಸಲಾಗಿ, ಅಂದೆ 400 ಲಾರಿ ಕಾರ್ಮಿಕರು ಬೃಹತ್ ಮೆರವಣಿಗೆಯನ್ನು ತೆಗೆದು ಕೆಂಬಾವುಟ ಹಿಡಿದು ನಗರದ ಮುಖ್ಯ ಬೀದಿಗಳಲ್ಲಿ ಹಾದು ಜಿಲ್ಲಾಧಿಕಾರಿ, ಮಾಲಕರಿಗೆ ಹಾಗು ಲೇಬರ ಆಫೀಸರಿಗೆ ಮನವಿಯನ್ನು ಅರ್ಪಿಸಲಾಯಿತು. ಜುಲೈ 15ರಂದು ರಾಯಚೂರು ಜಿಲ್ಲೆಯ ಎಲ್ಲಾ ಲಾರಿಗಳನ್ನು ನಿಲ್ಲಿಸಲಾಯಿತು. 16ರ ಸಾಯಂಕಾಲ ಪೋಲೀಸ ಅಧಿಕಾರಿಗಳು ದಬ್ಬಾಳಿಕೆ ಮಾಡಲು ಯೋಚಿಸಿದರು. ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಅಧಿಕಾರಿಯವರು ಜುಲೈ 20ರಂದು ಮಾತುಕತೆ ನಡೆಸುವ ಆಶ್ವಾಸನೆಯನ್ನು ಕೊಡಲಾಗಿ ಪುನಃ ಎಲ್ಲಾ ಲಾರಿಗಳನ್ನು ಬಿಡಲಾಯಿತು. ಜುಲೈ 20ರ ತನಕ ದಿನಕ್ಕೆ 2 ಬೃಹತ್ ಮೆರವಣಿಗೆಗಳನ್ನು ರಾಯಚೂರಿನ ಬೀದಿಗಳಲ್ಲಿ ಘೋಷಣೆಯೊಂದಿಗೆ ಹೊರಡಿಸಿ ಸುಮಾರು 3 ಸಾರ್ವಜನಿಕ ಸಭೆಯನ್ನು ಏರ್ಪಡಿಸಿ ಲಾರಿ ಮಾಲಿಕರು ನಡೆಸುವ ಶೋಷಣೆಯ ವಿಧಾನ, ಮತ್ತು ಅಧಿಕಾರಿಗಳ, ಪೋಲೀಸರ, ರಾಜಕಾರಣಿಗಳ ಮುಖವಾಡವನ್ನು ಜನತೆಗೆ ತಿಳಿಸಲಾಯಿತು. ಹೀಗಾಗಿ ನಮ್ಮ ಸಿ.ಐ.ಟಿ.ಯು. ಹೋರಾಟಕ್ಕೆ ಸಮಸ್ತ ಜನರ ಬೆಂಬಲ ದಿನೇದಿನೇ ಹೆಚ್ಚುತ್ತ ಇತ್ತು.

ಜುಲೈ 20ರಂದು ಲೇಬರ್ ಆಫೀಸ್‌ನಲ್ಲಿ ಲಾರಿ ಮಾಲಿಕರ ಪ್ರತಿನಿಧಿಗಳು ಮತ್ತು ನಮ್ಮ ಸಂಘಟನೆಯ ಪ್ರತಿನಿಧಿಗಳು ಮಾತುಕತೆಗಳು ಪ್ರಾರಂಭವಾಗಿ ಮಾಲಿಕರ ಹಠಮಾರಿತನದಿಂದ ಕೇವಲ ಚಾಲಕರಿಗೆ 225/- ರೂ. ಕೊಡುವದಾಗಿ ಮತ್ತು ಕ್ಲೀನರುಗಳಿಗೆ 175/- ಕಾನೂನು ಪ್ರಕಾರ (1968 ನೇ ಆಧಾರ) ಕೊಡುವದಾಗಿ ಅದಕ್ಕಿಂತ ಹೆಚ್ಚು ಆಗುವುದಿಲ್ಲವೆಂದು ಜಿಗುಟುತನದಿಂದ ತಿಳಿಸಲಾಗಿ ಮಾತುಕತೆ ವಿಫಲವಾಯಿತು.

ಹೀಗಾಗಿ ಲಾರಿ ಕಾರ್ಮಿಕರು ಜುಲೈ 21 ರಂದು ಎಲ್ಲಾ ಲಾರಿಗಳನ್ನು ಪುನಃ ಬಂದ್ ಮಾಡಿದರು. ಒಬ್ಬರೂ ಕೆಲಸಕ್ಕೆ ಹೋಗದಂತಾಯಿತು. ಕರ್ನಾಟಕ ಸರ್ಕಾರದ ರಾಜ್ಯಪಾಲರಾದ ಶ್ರೀಮಾನ್ ಗೋವಿಂದ ನಾರಾಯಣರವರ ಜುಲೈ 21 ಮತ್ತು 22ರಂದು ರಾಯಚೂರಿಗೆ ಪ್ರವಾಸದ ಕಾರ್ಯಕ್ರಮ ಇತ್ತು. ಹಿಂದಿನ ದಿವಸ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಸೀಲ್ದಾರ ಎಲ್ಲಾ ಅಧಿಕಾರಿಗಳು ಮಾಲಿಕರ ಪರವಾಗಿ ನಮನ್ನು ಕರೆದು ಅಂಜಿಕೆ ಹಾಕಿದರು. "ಕಾನೂನನ್ನು ಕೈಯಲ್ಲಿ ತೆಗೆದುಕೊಂಡಿದ್ದಿರಿ, ನೀವು ಗೂಂಡಾಗಳು, ಶಾಂತಿಭಂಗ ಮಾಡಿದ್ದಿರಿ (ಮನಶ್ಶಾಂತಿ ಭಂಗ), ಲಾರಿ ಕಾರ್ಮಿಕ ಮುಖಂಡರಾದ ಕಾಂ ಕಲಾಲಬಂಡಿ, ಪುರುಷೋತ್ತಮ ಮತ್ತು ಕಾಂ. ಚಂದ್ರಶೇಖರ ಬಾಳೆ, ಮಾರ್ಕ್ಸ್‌ವಾದಿ ಪಕ್ಷದ ಕಾರ್ಯದರ್ಶಿ ಇವರನ್ನ ಗಡಿಪಾರು ಮಾಡುವುದಾಗಿ" ಹೆದರಿಕೆ ಹಾಕಲಾಯಿತು.

ಪ್ರಾರಂಭದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡುವ ಹಾಗಿಲ್ಲಾಂದು ಹೇಳಿದ ಅಧಿಕಾರಿಗಳು ಕೊನೆಗೆ ಜುಲೈ 21ರಂದು ಭೇಟಿ ಮಾಡಲು ಅವಕಾಶ ಕೊಡಲಾಯಿತು. ಜುಲೈ 22ರಂದು 12-45ಕ್ಕೆ ರಾಜ್ಯಪಾಲರಿಗೆ ಮನವಿ ಅರ್ಪಿಸಿ ಅವರು ಕೂಡ ಆಶ್ವಾಸನೆಯನ್ನು ಕೊಟ್ಟರು.

ಲಾರಿ ಕಾರ್ಮಿಕರು ಶಾಂತಿ ಮತ್ತು ಶಿಸ್ತಿನಿಂದ ಲಾರಿಗಳನ್ನ ಬಂದ್ ಮಾಡುವ ಕಾರ್ಯದಲ್ಲಿ ನಿರತರಾಗಿದ್ದಾಗ, ರಾಜ್ಯಪಾಲರು 4-30 ಗಂಟೆಗೆ ಹೆಲಿಕಾಪ್ಟರಲ್ಲಿ ಹೋಗುತ್ತಿದ್ದಂತೆ 41 ಪೋಲೀಸ್ ವ್ಯಾನುಗಳು ಉನ್ನತ ಅಧಿಕಾರಿಗಳೊಂದಿಗೆ ಬಂದು 4-45ಕ್ಕೆ ಅಶ್ಲೀಲ ಶಬ್ದಗಳಿಂದ ಬಯ್ಯುತ್ತ ಲಾರಿ ಕಾರ್ಮಿಕರ ಮೇಲೆ, ಹಮಾಲರ ಮೇಲೆ ಅಮಾನುಷವಾಗಿ ಲಾಠಿಚಾರ್ಜ ಮಾಡಿದರು. ರಾಯಚೂರ ನಗರದಲ್ಲಿ ಅಂದು 5 ಗಂಟೆಗೆ ಸಾರ್ವಜನಿಕ ಸಭೆ ನಡೆಯುವದೆಂದು ಗೊತ್ತಿದ್ದ ನಾಗರೀಕ ಬಾಂಧವರು ತೀನಕಂದಿಲ್ ಚೌಕದ ಹತ್ತಿರ ಸೇರಿದ್ದರು. ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಬೃಹತ್ ಮೆರವಣಿಗೆಯ ಲಾರಿ ಕಾರ್ಮಿಕರು, ಹಮಾಲಿ, ಗುಮಾಸ್ತರು, ಪಿ ಡಬ್ಲ್ಯು.ಡಿ. ರಸ್ತೆ ಸಾರಿಗೆ ಸಂಸ್ಥೆಯ ಕಾರ್ಮಿಕರು ಸೈಕಲ್ ರಿಕ್ಷಾ ಕಾರ್ಮಿಕರು ಎಂಬಂತೆ ಸಾವಿರಾರು ಕಾರ್ಮಿಕರ ಮೆರವಣಿಗೆಯನ್ನು ನೋಡಲು ರಸ್ತೆ ಅಂಚಿನಲ್ಲಿ ಕಾಯುತ್ತಾ ಇದ್ದ ರಾಯಚೂರಿನ ನಾಗರೀಕರ ಮೇಲೆ ನೂಕು ನುಗ್ಗಲು ಆಗುತ್ತಿದ್ದಿತೆಂಬ ಸುಳ್ಳು ನೆಪವನ್ನೊಡ್ಡಿ ಪೋಲೀಸ ಅಧಿಕಾರಿಗಳು ಲಾಠಿ ಚಾರ್ಜನ್ನು ನಡೆಸಿದರು ಈ ರೀತಿಯಾಗಿ 6 ಸ್ಥಳದಲ್ಲಿ ಲಾಠಿಚಾರ್ಜ ಮಾಡಿ ಒಬ್ಬನ ಕಾಲು, ಹಮಾಲಿ ಕಾರ್ಮಿಕನ ಕೈ 68 ಜನರಿಗೆ ಗಾಯಗಳಾದವು.

ಅಂದೆ 250 ಜನರನ್ನು ಬಂಧಿಸಲಾಯಿತು. ಬಂಧಿತರಾದವರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಕಾಂ. ಚಂದ್ರಶೇಖರ ಬಾಳೆ, ಲಾರಿ ಕಾರ್ಮಿಕಸಂಘದ ಕಾರ್ಯದರ್ಶಿ ಕಾಂ. ಕೆ. ವಿರನ್ನಾ ಮುಂತಾದವರು ಇದ್ದರು.

ಕಾರು ನಡೆಸುತ್ತಿದ್ದ ಕಾರ್ಮಿಕರು ನಮ್ಮೊಂದಿಗೆ ಬೆಂಬಲ ಸೂಚಿಸಿ ಸ್ವತಃ 50 ಜನ ಅರೆಸ್ಟ್ ಆದರು.

ಕಾರ್ಮಿಕರನ್ನು ಚೆನ್ನಾಗಿ ಥಳಿಸಿದ ಮೇಲೆ ಸ್ಥಳೀಯ ಪತ್ರಿಕೆಗಳಲ್ಲಿ ಮತ್ತು ರಾಜ್ಯದ ಪತ್ರಿಕೆಗಳಲ್ಲಿ ಪೋಲೀಸರಿಗೆ ಗಾಯಗಳಾಗಿವೆಂದು ಸುಳ್ಳು ಪ್ರಚಾರ ಮಾಡಿ, ನಾವು ಕಳುಹಿಸಿದ ಎಲ್ಲಾ ವರದಿಯನ್ನು ಸೆನ್ಸಾರ್ ಮಾಡಲಾಗಿದೆ.

ಜುಲೈ 23ರಂದು 'ರಾಯಚೂರ್ ಬಂದ್' ಮಾಡುವ ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು. ಅಂದೆ 35 ಪೋಲೀಸ ಕಾಯಿದೆ ಮತ್ತು ಸಿ. ಆರ್ ಪಿ ಸಿ. 144 ಕಾಲಂ ಜಾರಿಗೊಳಿಸಲಾಯಿತು.

ಲಾರಿ ಮಾಲೀಕರು ಮತ್ತು ಪೋಲೀಸ ಅಧಿಕಾರಿಗಳು ಒಗ್ಗಟ್ಟಾಗಿ ಸ್ಥಳೀಯ ಕಾಂಗ್ರೆಸ್ (ಐ) ಪಕ್ಷದೊಡಗೂಡಿ 'ರಾಯಚೂರ ಬಂದ್' ಕಾರ್ಯಕ್ರಮವನ್ನು ವಿಫಲಗೊಳಿಸಲು ಭಗೀರಥ ಪ್ರಯತ್ನ ಮಾಡಲಾಯಿತು. ಆದರೆ ಜುಲೈ 23ರಂದು ಸೈಕಲ್ ರಿಕ್ಷಾ ಕಾರ್ಮಿಕರು ರಿಕ್ಷಾ ಚಲಾಯಿಸುವುದನ್ನು ನಿಲ್ಲಿಸಿದರು. ಗುಮಾಸ್ತರು, ಹಮಾಲಿ ಮುಂತಾದ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು 1500 ಸಂಖ್ಯೆಯೊಂದಿಗೆ 'ಪೋಲೀಸರಿಗೆ ಧಿಕ್ಕಾರ, ಎಸ್. ಎಫ್. ಐ. ಜಿಂದಾಬಾದ್, ಕಾರ್ಮಿಕ ವಿದ್ಯಾರ್ಥಿಗಳ ಐಕ್ಯತೆಗೆ ಜಯವಾಗಲಿ' ಮುಂತಾದ ಘೋಷಣೆಗಳೊಂದಿಗೆ ಕೂಗುತ್ತಾ ಶಾಂತಿ, ಶಿಸ್ತುಬದ್ಧವಾಗಿ ರಾಯಚೂರ ಬಂದ್ ಕಾರ್ಯಕ್ರಮವನ್ನು ಯಶಸ್ವಿ ಆಯಿತು. ಎಲ್ಲಾ ಶಾಲೆ ಕಾಲೇಜುಗಳು ರಜಘೋಷಿಸಿದವು. ನಗರದ ವಕೀಲರ ಸಂಘವು ಬೆಂಬಲವಿತ್ತಿತ್ತು.

80 ಲಾರಿ ಕಾರ್ಮಿಕರ ಮೇಲೆ ಸುಳ್ಳು ಮೊಕದ್ದಮೆಯನ್ನು ಹೂಡಿರುತ್ತಾರೆ. ಅದರಲ್ಲಿ 20 ಜನರ ಮೇಲೆ ಸಿ ಪಿ ಐ (ಎಂ) ಕಾರ್ಯದರ್ಶಿ ಕಾಂ. ಬಾಳೆಯವರ ಮೇಲೆ 395 ಐ. ಪಿ. ಸಿ. ದರೋಡೆಯ ಮೊಕದ್ದಮೆಯನ್ನು ಅನ್ಯಾಯವಾಗಿ ಮಾಡಿ ಬೇಲನ್ನು ಕೂಡ ಬರದಂತೆ 10 ದಿನ ಜೈಲಿನಲ್ಲಿಡಲಾಯಿತು.

ಆಗಸ್ಟ್ 2ರಂದು ಎಲ್ಲರಿಗೂ ಜಾಮೀನು ಮೇಲೆ ಬಿಡಲಾಯಿತು. ಇಲ್ಲಿ ಮುಖ್ಯ ಅಂಶವೆಂದರೆ ನಗರದ 65 ವಕೀಲರು 5 ಮೊಕದ್ದಮೆಯಲ್ಲಿ ನಮ್ಮ ಕಾರ್ಮಿಕರ ಬೆಂಬಲಾರ್ಥವಾಗಿ ಸಹಿ ಹಾಕಿರುವರು.

ಇದೀಗ ಒಂದು ತಿಂಗಳಿಗಿಂತಲೂ ಹೆಚ್ಚು ದಿನಗಳ ಹೋರಾಟ ಮುಂದುವರೆದಿದೆ. ಕರ್ಫ್ಯೂವನ್ನು ಜುಲೈ 22ರಿಂದ 28, ಆಮೇಲೆ ಆಗಸ್ಟ್ 4,8,11ರ ವರೆಗೆ ಮುಂದುವರೆಸುತ್ತ ಅಧಿಕಾರಿಗಳು ಮಾಲಕರನ್ನು ರಕ್ಷಿಸುತ್ತ ಕಾರ್ಮಿಕರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ.

ಆಗಸ್ಟ್ 4ರಂದು ಸಾಯಂಕಾಲ ಲಾರಿ ಕಾರ್ಮಿಕರ ಕಾರ್ಯಕಾರಿ ಮಂಡಳಿಯ ಸದಸ್ಯರ ಸಭೆಯನ್ನು ಕರೆದು ಹೋರಾಟದ ವರದಿ, ಅದರ ಪಾಠಗಳು, ಜಿಲ್ಲೆಯ ವಾತಾವರಣ, ರಾಜ್ಯದ ಎಲ್ಲಾ ಪರಿಸ್ಥಿತಿಯನ್ನು ಗಮನಕ್ಕೆ ತಂದು ನಮ್ಮ ಹೋರಾಟವನ್ನು ತಾತ್ಕಾಲಿಕ ನಿಲ್ಲಿಸಲಾಗಿರುತ್ತದೆ.

ಆದರೂ ಲಾರಿ ಕಾರ್ಮಿಕರು ತಮ್ಮ ಐಕ್ಯತಾ ಶಕ್ತಿಯನ್ನು ಮರೆತಿಲ್ಲಾ. ಜಾತಿ, ಪ್ರಾದೇಶಿಕ ಭಾವನೆಯನ್ನು ಬಿಟ್ಟು ಶೋಷಣೆಯನ್ನು ದಮನ ಮಾಡಲು ಸಿ ಐ ಟಿ.ಯು. ನೊಂದಿಗೆ ನಡುಕಟ್ಟಿ ನಿಂತಿದ್ದಾರೆ. ಈ ಹೋರಾಟಕ್ಕೆ ಬೆಂಬಲವಿತ್ತ ಎಲ್ಲಾ ಕಾರ್ಮಿಕ ಬಾಂಧವರಿಗೆ ವಿದ್ಯಾರ್ಥಿಗಳಿಗೆ, ಯುವಜನರಿಗೆ, ವಕೀಲರಿಗೆ ನಮ್ಮ ಸಿ ಐ ಟಿ. ಯು. ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸಿದೆ.

●

ಜಯರಾಮ್‌ದಾಸ್ ಉದ್ಯೋಗ್‌ನಿಂದ ಕಾರ್ಮಿಕರ ಶೋಷಣೆ

ಬೆಂಗಳೂರು ನಗರದಿಂದ ಏಳನೇ ಮೈಲಿಯಲ್ಲಿ ಜಯರಾಮ್ ದಾಸ್ ಉದ್ಯೋಗ್ ಎಂಬ ಎಂಜಿನಿಯರಿಂಗ್ ಕಂಪನಿಯಿದೆ. ಇದರಲ್ಲಿ ಸುಮಾರು 400ಕೆಲಸಗಾರರು ದುಡಿಯುತ್ತಿದ್ದಾರೆ. ಇದರಲ್ಲಿ ತಯಾರಾಗುವ ವಸ್ತುಗಳು ಮುಖ್ಯ ಕೈಗಾರಿಕೆಗಳಿಗೆ ಬೇಕಾದವು. 20 ವರ್ಷಗಳಿಂದ ಹೇರಳ ಲಾಭ ಗಳಿಸಿರುವ ಈ ಕಂಪನಿ ಕಾರ್ಮಿಕರಿಗೆಬೋನಸ್ ಕೊಟ್ಟಿಲ್ಲ. ಇಲ್ಲಿನ ಯುವಕಾರ್ಮಿಕರು ಇನ್ನೂ ಸಂಘಟಿತರಾಗಿಲ್ಲ. ಹಿಂದೆ ಕಾರ್ಮಿಕ ಸಂಘ ಕಟ್ಟಿದಾಗ ಮಾಲೀಕರು ಅದನ್ನು ನುಚ್ಚುನೂರು ಮಾಡಿ 160 ಕಾರ್ಮಿಕರನ್ನು ವಜಾ ಮಾಡಿದರು. ಕಾರ್ಮಿಕರ ವಜಾವನ್ನು ಬಂಡವಾಳಶಾಹಿ ನ್ಯಾಯಾಲಯ ಎತ್ತಿ ಹಿಡಿದಿತ್ತು. ನಂತರದ ಸಂಘದ ಅಧ್ಯಕ್ಷರು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರೇ! ಅದರ ಕಾರ್ಯದರ್ಶಿ ಕಂಪನಿಯ ಕಾರ್ಯದರ್ಶಿಯೇ! ಆದರೆ ಹೊಸದಾಗಿ ಬಂದ ಕಾರ್ಮಿಕರು ಉತ್ಸಾಹ ತಳೆದು ಸಂಘದ ಚುನಾವಣೆಗಳಲ್ಲಿ ಸ್ಪರ್ಧಿಸಲು ಯೋಚಿಸಿದರು. ಆದರೆ ಮಾಲೀಕರು ಅವರನ್ನು ಕರೆದು, ನಾಮಪತ್ರ ವಾಪಸ್ಸು ಪಡೆಯಲು ಕೇಳಿದರು. ನಿರಾಕರಿಸಿದಾಗ ಈ ಕಾರ್ಮಿಕರು ವಜಾ ಆದರು. ರಂಗಸ್ವಾಮಿ, ಹನುಮಪ್ಪ ಇವರೇ ವಜಾ ಆದ ಕಾರ್ಮಿಕರು.

ಆದರೆ ಚುನಾವಣೆ ನಡೆಯಿತು. ಆರಿಸಿಬಂದ ಕಾರ್ಮಿಕ ಪ್ರತಿನಿಧಿಗಳಿಗೆ ಕಿರುಕುಳ ಆರಂಭವಾಯಿತು. ಕಂಪನಿಯ ಕಾರ್ಯದರ್ಶಿಯೇ ಸಂಘದ ಕಾರ್ಯದರ್ಶಿಯಾಗಿ ಮುಂದುವರೆದರು. ಆದರೆ

(6ನೇ ಪುಟ ನೋಡಿ)

ಶಿವಮೊಗ್ಗದಲ್ಲಿ ಸಂಘಟನಾ ಸಮಿತಿ ಸಭೆ

ತಾ. 27-7-80ನೇ ಭಾನುವಾರ ಮಧ್ಯಾಹ್ನ 11 ಗಂಟೆಗೆ ಪಕ್ಷದ ಕಛೇರಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿವಮೊಗ್ಗ ಜಿಲ್ಲಾ ಸಮಿತಿಯ ವಿಶೇಷ ಸಭೆ ಸೇರಿತ್ತು. ಇತ್ತೀಚೆಗೆ ತುಮಕೂರಿನಲ್ಲಿ ನಡೆದ ರಾಜ್ಯಸಮಿತಿ ಸಭೆಯ ತೀರ್ಮಾನಗಳನ್ನು ಕಾಂ. ಚಂದುಕುಟ್ಟಿಯವರು ವರದಿ ಮಾಡಿದರು. ಅದರ ತೀರ್ಮಾನದಂತೆ ಸಭೆಯು ಕೆಳಗೆ ಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿದರು.

1. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರುಗಳಾದ ಕಾಂ. ದಿನೇನ್ ಭಟ್ಟಾಚಾರ್ಯ (ಪ. ಬಂಗಾಳ) ಕಾಂ. ಎ. ವಿ. ಕುಂಜಾಬು (ಕೇರಳ) ಇವರುಗಳ ನಿಧನದ ಬಗ್ಗೆ ಸಂತಾಪ ಸೂಚಿಸಿ ಸಭೆ ಎರಡು ನಿಮಿಷ ನಿಂತು ಮೌನ ಆಚರಿಸಿತು.

2. ದಿನಬಳಕೆ ವಸ್ತುಗಳ ಮತ್ತು ರೈತರ ಸಾಮಗ್ರಿಗಳ ಬೆಲೆಏರಿಕೆ ವಿರುದ್ಧ ನಡೆಸುತ್ತಿರುವ ಜನತೆಯ ಶಾಂತಿಯುತ ಹೋರಾಟಗಳನ್ನು (ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದಲ್ಲಿ) ದಮನಗೊಳಿಸಲು ಪೋಲೀಸರು ನಡೆಸುತ್ತಿರುವ ಲಾಠಿಚಾರ್ಜು, ಅಶ್ರುವಾಯು ಪ್ರಯೋಗ, ಗೋಲೀಬಾರ್ ಮುಂತಾದ ದಮನಕಾರಿ ಕಾರ್ಯಾಚರಣೆಯನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ. ಈ ಘಟನೆಗಳಿಂದ ಸಂಕಷ್ಟ, ಜನತೆಯ ಸಮಸ್ಯೆಗಳನ್ನು, ಸಾಮಾನುಗಳ ಬೆಲೆ ಮತ್ತು ಬಸ್ ದರವನ್ನು ತಡೆಗಟ್ಟಲು ಕಾಂಗ್ರೆಸ್ (ಐ) ಸರ್ಕಾರ ವಿಫಲಗೊಂಡಿದೆ ಎಂದು ತೋರಿಸುತ್ತದೆ. ರಾಜ್ಯ ಸಮಿತಿಯ ತೀರ್ಮಾನದಂತೆ ಬೆಲೆ ಏರಿಕೆ ಮತ್ತು ಇತರ ಸಮಸ್ಯೆಗಳ ವಿರುದ್ಧ ಇತರ ಪಕ್ಷಗಳೊಂದಿಗೆ ಹೋರಾಟ ನಡೆಸಲು ಸಭೆಯು ತೀರ್ಮಾನಿಸಿದೆ.

3. ಹೆಚ್ಚುತ್ತಿರುವ ಪೋಲೀಸು ದಬ್ಬಾಳಿಕೆಯನ್ನು ಮತ್ತು ಲಾಕಪ್ ಮರಣಗಳ ವಿರುದ್ಧ ಆಗಸ್ಟ್ 25ರಿಂದ 31ರ ತನಕ ಪೋಲೀಸ್ ದೌರ್ಜನ್ಯ ವಿರೋಧಿ ಸಾರಾಚರಣೆಯನ್ನು ಆಚರಿಸಲು ಸಭೆಯು ತೀರ್ಮಾನಿಸುತ್ತದೆ.

4. ರಾಜ್ಯಸರಕಾರವು ಜಾರಿಗೆ ತರಲು ಯೋಚಿಸಿರುವ ಅಗತ್ಯಸೇವಾ ಮಸೂದೆಯನ್ನು ಹಿಂತೆಗೆದುಕೊಳ್ಳಲು ಮತ್ತು ಕಾರ್ಮಿಕರ-ಮಾಲೀಕರ ವಿವಾದಗಳಲ್ಲಿ ಮಾಲೀಕರ ಪರವಾಗಿ ಪೋಲೀಸರು ಮಧ್ಯಪ್ರವೇಶ ಮಾಡುವುದನ್ನು ನಿಲ್ಲಿಸಲು ಒತ್ತಾಯಿಸಿ ರಾಜ್ಯದ ಕಾರ್ಮಿಕಸಂಘಗಳ ಸಮಾವೇಶದ ತೀರ್ಮಾನದಂತೆ ಆಗಸ್ಟ್ 18ರಂದು ರಾಜ್ಯಾದ್ಯಂತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿರುವುದನ್ನು ಈ ಸಭೆಯು ಬೆಂಬಲಿಸುತ್ತದೆ.

ಸಭೆಯ ಕಾರ್ಯಕಲಾಪಗಳಲ್ಲಿ ಕಾಂ. ಶಿವಶಂಕರ್, ಕಾಂ. ಗೋಪಾಲ್ ನಾಯ್ಕ, ಕಾಂ. ನರಸಿಂಹಗೌಡ, ಕಾಂ. ರಫಿ ಮುಂತಾದವರು ಭಾಗವಹಿಸಿದ್ದರು.

○

ಸರ್ಕಾರಿ ಕಲಾ ಕಾಲೇಜಿನಲ್ಲಿ ಎಸ್.ಎಫ್.ಐ.ಸಂಘಟನಾ ಸಮಿತಿ

ಸರ್ಕಾರಿ ಕಲಾ ಕಾಲೇಜಿನ ಸದಸ್ಯರ ಸಭೆಯು ಸೇರಿ ದಿನಾಂಕ 26-7-80ರಂದು 1980-81ನೇ ಸಾಲಿಗೆ ಅಲ್ಲಿನ ಸಮಿತಿಯ ಕಾರ್ಯದರ್ಶಿಯಾಗಿ ಕಾಂ. ರಾಜಣ್ಣ ಮತ್ತು 13 ಮಂದಿ ಸದಸ್ಯರನ್ನೊಳಗೊಂಡ ಸಂಘಟನಾ ಸಮಿತಿಯನ್ನು ಆಯ್ಕೆ ಮಾಡಲಾಗಿದೆ. ಈ ಸಭೆಯ ಅಧ್ಯಕ್ಷತೆಯನ್ನು ಕಾಂ. ಆರಾಧ್ಯ ವಹಿಸಿದ್ದರು.

ಸಾರ್ವತ್ರಿಕ ಮುಷ್ಕರಕ್ಕೆ ತುಮಕೂರಲ್ಲಿ ತಯ್ಯಾರಿ

ಕೇಂದ್ರ ಕಾರ್ಮಿಕ ಸಂಘಗಳ ಸಂಯುಕ್ತ ಸಮಾವೇಶದ ಕರೆಗೆ ಅನುಗುಣವಾಗಿ ತುಮಕೂರು ಜಿಲ್ಲೆಯ ವಿವಿಧ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ದಿ. 6,8.80 ರಂದು ತುಮಕೂರಿನ ಕಪಾಲಿ ಹೋಟೆಲ್ ಸಭಾಂಗಣದಲ್ಲಿ ಸಭೆಸೇರಿ ಕರ್ನಾಟಕ ರಾಜ್ಯ ಸರಕಾರವು ತರಲಿರುವ ಅಗತ್ಯಸೇವಾ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಒತ್ತಾಯಿಸಲು ಇದೇ ತಿಂಗಳು 18 ರಂದು ಜಿಲ್ಲೆಯಾದ್ಯಂತ ಸಾರ್ವತ್ರಿಕ ಮುಷ್ಕರ, ಮೆರವಣಿಗೆ, ಸಭೆಗಳನ್ನು ಯಶಸ್ವಿಯಾಗಿ ನಡೆಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಇದರ ಸಿದ್ಧತೆಗಾಗಿ ಹೋರಾಟ ಸಮಿತಿಯೊಂದನ್ನು ರಚಿಸಲಾಯಿತು. ಸಭೆಯಲ್ಲಿ 50 ಕ್ಕೂ ಹೆಚ್ಚು ಕಾರ್ಮಿಕ ಮುಖಂಡರುಗಳು ಭಾಗವಹಿಸಿದ್ದರು. ಕಾಮ್ರೇಡ್ ಮಹಮದ್ ದಸ್ತಗೀರ್, ಕಾಂ. ಬಡೇಸಾಹೇಬ್ (ಸಿ.ಐ.ಟಿ.ಯು.); ಕಾಂ. ಎನ್. ಶಿವಣ್ಣ, ಟಿ. ಆರ್. ರೇವಣ್ಣ (ಎ.ಐ.ಟಿ.ಯು.ಸಿ.); ಶ್ರೀ ರಾಜಾಚಾರ್, ಶ್ರೀ ಬಾಲಕೃಷ್ಣ ಪೈ, (ಬಿ. ಎಂ. ಎಸ್.); ಶ್ರೀ ಡಾ. ಚೆರಿಯನ್, ಶ್ರೀ ಸಿ. ಎನ್. ಭಾಸ್ಕರಪ್ಪ (ಐ. ಎನ್. ಟಿ. ಯು. ಸಿ.); ಶ್ರೀ ಶ್ರೀರಾಮರೆಡ್ಡಿ (ಎಸ್. ಎಲ್. ಡಿ. ಬ್ಯಾಂಕ್ ನೌಕರರ ಸಂಘ); ಶ್ರೀ ಸುಂದರೇಶನ್ (ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಷನ್): ಶ್ರೀ ರಾಮಕೃಷ್ಣಪ್ಪ (ಕೆ.ಎಸ್.ಆರ್.ಟಿ.ಸಿ.) ಶ್ರೀ ಆರಾಧ್ಯ (ಜ್ಯೋತಿ ಹೋಂ ಇಂಡಸ್ಟ್ರೀಸ್ ಎಂಪ್ಲಾಯೀಸ್ ಅಸೋಸಿಯೇಷನ್) ಸುಭಾನ್ ಸಾಹೇಬ್ (ಮುನಿಸಿಪಲ್ ಎಂಪ್ಲಾಯೀಸ್ ಅಸೋಸಿಯೇಷನ್) ಟಿ. ಜಿ. ಸಿದ್ಧಲಿಂಗಯ್ಯ, (ಬಿ. ಎಲ್. ಡಿ.), ಸುಬ್ರಮಣ್ಯ (ಬಾಡಿ ಬಿಲ್ಡರ್ಸ್ ಅಸೋಸಿಯೇಷನ್) ಶ್ರೀ ನಾಗರಾಜ್ (ಇಂಡಸ್ಟ್ರಿಯಲ್ ಎಸ್ಟೇಟ್ ವರ್ಕರ್ಸ್ ಅಸೋಸಿಯೇಷನ್) ಇವರನ್ನೊಳಗೊಂಡ ಉಪಸಮಿತಿಯೊಂದನ್ನು ರಚಿಸಿ ಶ್ರೀ ವೆಂಕೋಬರಾಯರನ್ನು ಖಜಾಂಚಿಯನ್ನಾಗಿ ಆರಿಸಲಾಯಿತು.

ಪ್ರಾರಂಭದಲ್ಲಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಕಾಂ. ಕೆ. ಆರ್. ನಾಯಕ್‌ರವರು ವಿವರಿಸಿದರು. ಶ್ರೀ ಸಿ. ಎನ್. ಭಾಸ್ಕರಪ್ಪನವರು ಅಧ್ಯಕ್ಷತೆ ವಹಿಸಿದ್ದರು.

●

ಜಯರಾಮ್‌ದಾಸ್ ಉದ್ಯೋಗ್‌ನಿಂದ ಕಾರ್ಮಿಕರ ಶೋಷಣೆ

(5ನೇ ಪುಟದಿಂದ)

ಹಟಬಿಡದ ಕಾರ್ಮಿಕರು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾದರು. ಮಾಲೀಕರು ಮತ್ತೆ ವಜಾಮಾಡಿದರು. ಆ ಕಾರ್ಮಿಕ ಈಗ ಬ್ಯಾಂಕ್ ಸಾಲ ಪಡೆದು ರಿಕ್ಷಾ ಓಡಿಸಿ ಜೀವನ ಮಾಡುತ್ತಿದ್ದಾನೆ. ಕೆಲಸದ ವಿವಾದ ನ್ಯಾಯಾಲಯದಲ್ಲಿದೆ.

ಈಗಿನ ಸಂಘದ ಅಧಿಕಾರವರ್ಗ ಹೊಸ ಕಾರ್ಮಿಕ ಮುಖಂಡನಿಗಾಗಿ ಶೋಧನೆ ನಡೆಸಿತು. ಮೈಕೋ ಹೋರಾಟದಿಂದ ಸ್ಫೂರ್ತಿ ಪಡೆದು, ಎಸ್. ಸೂರ್ಯನಾರಾಯಣರಾವ್ ಅವರನ್ನು ಸಂಘದ ನಾಯಕತ್ವಕ್ಕೆ ಕೇಳಿಕೊಂಡರು. ಸಂಘದ ಕಚೇರಿ ಕಟ್ಟಡವನ್ನು ಕಾರ್ಖಾನೆಯ ಮುಂಭಾಗದಲ್ಲೇ ಕಟ್ಟಲಾರಂಭಿಸಿದರು. ಕುಪಿತರಾದ ಮಾಲೀಕರು ಸೂಚನೆ ಕೊಡದೆ ಕ್ಯಾಂಟೀನಿನ ತಿಂಡಿಯನ್ನು ಕಮ್ಮಿ ಮಾಡಿದರು. ಆದರೆ ಕಾರ್ಮಿಕರು ಒಗ್ಗಟ್ಟಿನಿಂದ ಊಟ ಮಾಡದೆ ನಾಲ್ಕು ದಿನ ಕೆಲಸ ಮಾಡಿದರು. ಇದನ್ನು ಸಹಿಸದ ಮಾಲೀಕರು ವಿನಾಕಾರಣ ಕ್ಯಾಂಟೀನ್ ಸಮಿತಿ ಸದಸ್ಯನನ್ನು ಅಮಾನತ್ ಮಾಡಿದರು. ಕೂಡಲೇ ಕಾರ್ಮಿಕರು ಮುಷ್ಕರ ಹೂಡಿದರು. ಕಾರ್ಮಿಕರ ಹೋರಾಟದ ಶಕ್ತಿಯನ್ನು ಕಂಡ ಆಡಳಿತ ವರ್ಗ ಈಗ ದಾರಿಗೆ ಬಂದು, ಸಂಘದ ಜೊತೆ ಮಾತುಕತೆಗೆ ತೊಡಗಿದೆ. ಕ್ಯಾಂಟೀನ್ ಸಮಿತಿ ಸದಸ್ಯನನ್ನು ಮತ್ತೆ ಕೆಲಸಕ್ಕೆ ನೇಮಿಸಿಕೊಂಡಿದೆ. ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವದಲ್ಲಿ ತಮ್ಮ ಬೇಡಿಕೆಗಳಿಗಾಗಿ ಹೋರಾಡಲು ದೃಢ ನಿಶ್ಚಯ ಮಾಡಿದ್ದಾರೆ.

●

ದ. ಕ. ಜಿಲ್ಲೆಯಲ್ಲಿ ತ್ರಿಪುರಾ ಪರಿಹಾರ ಸಂಗ್ರಹ

ಇತ್ತೀಚೆಗೆ ಛಿದ್ರಕಾರಿ ಶಕ್ತಿಗಳಿಂದ ನೊಂದ ತ್ರಿಪುರಾದ ಜನತೆಗೆ ಸಹಾಯ ಮಾಡಲು ದ. ಕ. ಜಿಲ್ಲೆಯಲ್ಲಿ ಇದುವರೆಗೆ ರೂ. 4400= 21 ಹಣ ಸಂಗ್ರಹವಾಗಿದೆ. ದ. ಕ. ಜಿಲ್ಲೆಯ ಜನತೆಯು ಈ ಆದರಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಕೆ. ಆರ್. ಶ್ರೀಯಾನ್ ಕೃತಜ್ಞತೆ ಅರ್ಪಿಸಿದ್ದಾರೆ. ಸಂಗ್ರಹವಾದ ಹಣದ ವಿವರ: ಸುಳ್ಯ ರೂ. 485.20; ಉಡುಪಿ: ರೂ. 380= 00; ಬಂಟ್ವಾಳ ರೂ. 507.55; ಪಡುಬಿದ್ರಿ-ಮೂಲ್ಕಿ: ರೂ. 215.00; ಮಂಗಳೂರು ಸಿಟಿ ರೂ. 417.21; ಮಂಗಳೂರು ತಾಲ್ಲೂಕು ರೂ. 1039.00; ದ. ಕ. ಜಿಲ್ಲಾ ಹಂಚಿನ ಕೆಲಸಗಾರರ ಸಂಘ ರೂ. 255.00; ಕುಂದಾಪುರ ರೂ. 959.25; ದ. ಕ. ಜಿಲ್ಲಾ ಪ್ಲೈವುಡ್ ಕಾರ್ಮಿಕಸಂಘ ರೂ. 112.00; ಇತರರು ರೂ. 30.00, ಒಟ್ಟು 4400= 21. ಪುತ್ತೂರಿನಿಂದ ರೂ. 50= 00ನ್ನು ಸಂಗ್ರಹಿಸಿ ನೇರವಾಗಿ ಕಳುಹಿಸಲಾಗಿದೆ.

●

ಎಸ್. ಎಫ್. ಐ. ಅಧ್ಯಯನ ಕೇಂದ್ರ

ಬೆಂಗಳೂರು ನಗರ ಶಾಖೆಯ ತೀರ್ಮಾನದಂತೆ ಎಸ್.ಎಫ್.ಐ. ವತಿಯಿಂದ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಎಸ್.ಎಫ್.ಐ. ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲಾಯಿತು. ಇದು ಪ್ರತಿ ಭಾನುವಾರ ನಡೆಯುತ್ತದೆ. ಇದಕ್ಕೆ ಪ್ರಿನ್ಸಿಪಾಲರನ್ನಾಗಿ ಕಾಂ. ಗೋಪಾಲಕೃಷ್ಣರವರನ್ನು ನೇಮಕ ಮಾಡಲಾಗಿದೆ. ದಿನಾಂಕ 3 8.80ರಂದು ನಡೆದ ತರಗತಿಯಲ್ಲಿ ಸುಮಾರು 24 ಮಂದಿ ವಿದ್ಯಾರ್ಥಿಗಳು ಮತ್ತು 8 ಮಂದಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಅಂದಿನ ತರಗತಿಯನ್ನು ಕಾಂ. ಎಸ್. ಆರ್. ಆರಾಧ್ಯ (ರಾಜ್ಯ ಸಮಿತಿ ಕಾರ್ಯದರ್ಶಿ) ಇವರು ಎಸ್. ಎಫ್. ಐ. ಕಾರ್ಯಕ್ರಮವನ್ನು ವಿವರಿಸಿದರು.

ಬೆಂಗಳೂರು ನಗರದಲ್ಲಿ ಎಸ್.ಎಫ್.ಐ. ನಾಲ್ಕು ಶಾಖೆಗಳ ಪ್ರಾರಂಭ :

ಬೆಂಗಳೂರು ಮಾಗಡಿ ರಸ್ತೆಯಲ್ಲಿರುವ ಬಾಪೂಜಿ ರೆಸಿಡೆನ್ಷಿಯಲ್ ಹೈಸ್ಕೂಲ್‌ನಲ್ಲಿ ಸರ್ವಸದಸ್ಯರ ಸಭೆ ಸೇರಿ, ಅಲ್ಲಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾಂ. ಮುನಿರಾಜು (ಕಾರ್ಯದರ್ಶಿ). ಉಪಾಧ್ಯಕ್ಷರಾಗಿ ಕಾಂ. ತಮ್ಮರು ಆರ್.ಎಲ್., ಸಹ ಕಾರ್ಯದರ್ಶಿಯಾಗಿ ರಾಮಕೃಷ್ಣ ಮತ್ತು 13 ಸದಸ್ಯರಿರುವ ಸಮಿತಿ ಆಯ್ಕೆ ಮಾಡಲಾಯಿತು.

ಶ್ರೀರಾಮಪುರದಲ್ಲಿ ಆರ್. ಗೋಪಾಲಸ್ವಾಮಿ ಐಯ್ಯರ್ ರೆಸಿಡೆನ್ಷಿಯಲ್ ಹಾಸ್ಟೆಲ್‌ನಲ್ಲಿ ಸಮಿತಿಯನ್ನು ರಚಿಸಲಾಯಿತು. ಉಪಾಧ್ಯಕ್ಷರಾಗಿ ಕಾಂ. ಶೇಖರ್, ಕಾರ್ಯದರ್ಶಿಯಾಗಿ ಕಾಂ. ಎಸ್. ದೇವರಾಜು, ಸಹಕಾರ್ಯದರ್ಶಿಯಾಗಿ ಶಿವಲಿಂಗಯ್ಯ ಇವರನ್ನು ಆಯ್ಕೆ ಮಾಡಲಾಯಿತು.

ಈ ಎರಡು ಸಮಿತಿಯ ಅಧ್ಯಕ್ಷರಾಗಿ ಕಾಂ. ಗೋಪಾಲಕೃಷ್ಣ (ಎಸ್. ಎಫ್. ಐ ನಗರ ಸಮಿತಿ ಸದಸ್ಯರು) ಅವರನ್ನು ಆಯ್ಕೆ ಮಾಡಲಾಗಿದೆ.

ಕಾರ್ಪೋರೇಷನ್ ಹೈಸ್ಕೂಲ್‌ನಲ್ಲಿ ಕಾರ್ಯದರ್ಶಿಯಾಗಿ ಕಾಂ. ಹನುಮಮೂರ್ತಿ ಎಚ್, ಅವರನ್ನು ಬಸವರಾಜುರವರನ್ನು ಆಯ್ಕೆಮಾಡಲಾಗಿದೆ. ಇದರ ಅಧ್ಯಕ್ಷರಾಗಿ ಕಾಂ. ರಾಜಣ್ಣ (ನಗರ ಸಮಿತಿ ಸಹ ಸಂಚಾಲಕರು) ಇವರನ್ನು ಆಯ್ಕೆ ಮಾಡಲಾಗಿದೆ.

●

ಕೋಲಾರದ ಸರ್ಕಾರಿ ಕಾಲೇಜಿನ ಪ್ರಿನ್ಸಿಪಾಲರಿಗೆ ಎಸ್.ಎಫ್.ಐ. ಬೇಡಿಕೆ ಪತ್ರ

ಕೋಲಾರದ ಎಸ್. ಎಫ್. ಐ. ಶಾಖೆಯ ನಿಯೋಗವು ಸರ್ಕಾರಿ ಕಾಲೇಜಿನ ಪ್ರಿನ್ಸಿಪಾಲರನ್ನು ಭೇಟಿ ಮಾಡಿ ಬೇಡಿಕೆಗಳ ಮನವಿಯೊಂದನ್ನು ಸಲ್ಲಿಸಿದೆ. ತರಗತಿಗಳನ್ನು ಸರಿಯಾಗಿ ನಡೆಸಬೇಕು, ಹೆಚ್ಚಿನ ಅಧ್ಯಾಪಕರನ್ನು ನೇಮಿಸಬೇಕು, ಕಾಲೇಜಿನ ಆವರಣದಲ್ಲಿ ಕ್ಯಾಂಟೀನ್ ತೆರೆಯಬೇಕು, ಗ್ರಂಥಭಂಡಾರವನ್ನು ಉತ್ತಮಪಡಿಸಬೇಕು, 78-79 ಮತ್ತು 79-80 ರಲ್ಲಿ ವಿದ್ಯಾರ್ಥಿಗಳು ಪಾವತಿ ಮಾಡಿರುವ ಶಿಕ್ಷಣ ಶುಲ್ಕವನ್ನು ರಿಯಾಯಿತಿ ದೊರಕಿದವರಿಗೆ ತಕ್ಷಣ ಹಿಂತಿರುಗಿಸಬೇಕು, ಪದವಿ ತರಗತಿಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಬೋಧಿಸಬೇಕು ಎಂಬ ಬೇಡಿಕೆಗಳನ್ನು ಈಡೇರಿಸಬೇಕೆಂದು ಕಾಂ ಶಿವಾನಂದ ನೇತೃತ್ವದ ನಿಯೋಗವು ಪ್ರಿನ್ಸಿಪಾಲರನ್ನು ಒತ್ತಾಯಿಸಿದೆ.

○

ಚಿಂತಾಮಣಿಯಲ್ಲಿ 'ಪ್ರತಿಭಟನಾ ದಿನ'

ಆಗಸ್ಟ್ 10ರಂದು ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಪ್ರತಿಭಟನಾ ದಿನ ಆಚರಿಸಲಾಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಚಿಂತಾಮಣಿ ತಾಲ್ಲೂಕು ರೈತಸಂಘ ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ಚಿಂತಾಮಣಿ ಶಾಖೆಯು ಜಂಟಿಯಾಗಿ ನೀಡಿದ್ದ ಕರೆಯ ಮೇರೆಗೆ ನೂರಾರು ರೈತರು ಮತ್ತು ವಿದ್ಯಾರ್ಥಿಗಳು ನಡೆಸಿದ ಮೆರವಣಿಗೆ ಪಟ್ಟಣದ ಜನರ ಗಮನ ಸೆಳೆಯಿತು. ರೈತರ ಮೇಲಿನ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ, ಬೆಲೆಏರಿಕೆಯನ್ನು ಪ್ರತಿಭಟಿಸಿ ಮತ್ತು ಕೋಲಾರ ಜಿಲ್ಲೆಯ ರೈತರ ಬೇಡಿಕೆಗಳಿಗಾಗಿ ನಡೆಸಿದ ಪ್ರತಿಭಟನಾ ದಿನ ಯಶಸ್ವಿಯಾಗಿ ನಡೆಯಿತು. ಕೆಲವು ವಿರೋಧಿಗಳು ಅಪಪ್ರಚಾರ ನಡೆಸಿದರೂ, ಪೋಲೀಸಿನವರು ಬೆಳಿಗ್ಗೆಯಿಂದಲೇ ಬಂದೂಕು ಹಿಡಿದು ಭಯದ ವಾತಾವರಣ ನಿರ್ಮಿಸಿದರೂ ಧೈರ್ಯವಂತ ರೈತರು ಮತ್ತು ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಬಂದ್‌ಗೆ ಕರೆ ನೀಡಿರದಿದ್ದರೂ ಅಂದು 'ಚಿಂತಾಮಣಿ ಬಂದ್' ಆಗಿತ್ತು. ಪ್ಲೆಕಾರ್ಡುಗಳನ್ನು ಹಿಡಿದ ರೈತರು ಮತ್ತು ವಿದ್ಯಾರ್ಥಿಗಳು ಘೋಷಣೆಗಳನ್ನು ಕೂಗುತ್ತಾ ಆಜಾದ್ ಚೌಕದಲ್ಲಿ ನೆರೆದಾಗ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಅವರೊಡನೆ ಸೇರಿದರು.

ಬಹಿರಂಗ ಸಭೆಯನ್ನುದ್ದೇಶಿಸಿ ತಾಲ್ಲೂಕು ರೈತಮುಖಂಡರಾದ ಕಾಂ. ಅಶ್ವತ್ಥನಾರಾಯಣರೆಡ್ಡಿ, ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಲಕ್ಷ್ಮಣ ರೆಡ್ಡಿ ಮತ್ತು ಎಸ್.ಎಫ್.ಐ. ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ, ಮಾತನಾಡಿ ರಾಜ್ಯದ ರೈತ ಚಳುವಳಿಯ ಬಗ್ಗೆ ಮತ್ತು ಬೆಲೆ ಏರಿಕೆಗೆ ಕಾರಣ ಹಾಗೂ ಪರಿಹಾರಗಳನ್ನು ಸೂಚಿಸಿದರು. ಅನಗತ್ಯವಾಗಿ ಪೋಲೀಸರು 23 ಮಂದಿಯನ್ನು ಬಲಿತೆಗೆದುಕೊಂಡ ಗೋಲಿಬಾರ್ ಪ್ರಕರಣಗಳ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು, ಬಂಧಿತರ ಬಿಡುಗಡೆಯಾಗಬೇಕೆಂದು, ಮೃತರ ಕುಟುಂಬಗಳಿಗೆ ಪರಿಹಾರ ನೀಡಬೇಕೆಂದು, ಕ್ಷಾಮ ಪೀಡಿತ ಕೋಲಾರ ಜಿಲ್ಲೆ ಜನತೆಗೆ ಪರಿಹಾರ ಮತ್ತು ಜಿಲ್ಲೆಯ ಎಲ್ಲ ಶಾಲಾ-ಕಾಲೇಜುಗಳಲ್ಲಿ ಫೀ ರದ್ದು ಮಾಡಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಯಿತು. ಈ ಬೇಡಿಕೆಗಳು ಈಡೇರದಿದ್ದಲ್ಲಿ 'ಚಿಂತಾಮಣಿ ಬಂದ್' ಕರೆ ನೀಡುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಯಿತು. ಬಹಿರಂಗ ಸಭೆಯಲ್ಲಿ 'ಪ್ರತಿಭಟನಾ ದಿನ'ದ ಕಾರ್ಯಕ್ರಮಕ್ಕೆ ಬೆಂಬಲ ನೀಡಿ ಸ್ಥಳೀಯ ಭಾರತೀಯ ಜನತಾ ಪಕ್ಷದ ಮುಖಂಡ ನಾರಾಯಣ ಶೆಟ್ಟಿಯವರು ಸಹ ಮಾತನಾಡಿದರು.

●

ಯಶಸ್ವಿ ತಿಪಟೂರ್ ಬಂದ್

ದಿನಾಂಕ 4-8-80ರಂದು ತಿಪಟೂರು ತಾಲ್ಲೂಕು ವಿರೋಧ ಪಕ್ಷಗಳ ಸಂಯುಕ್ತ ಹೋರಾಟ ಸಮಿತಿ ಆಶ್ರಯದಲ್ಲಿ ಬೆಲೆಏರಿಕೆ, ಸರ್ಕಾರದ ದುರಾಡಳಿತ, ದೇಶಾದ್ಯಂತ ಹರಿಜನ ಗಿರಿಜನ, ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ, ಉತ್ತರ ಕರ್ನಾಟಕದಲ್ಲಿ ನಡೆದ ಗೋಲಿಬಾರ್ ಮೊದಲಾದವನ್ನು ವಿರೋಧಿಸಲು ಬಂದ್‌ಗೆ ಕರೆ ನೀಡಲಾಯಿತು. ಇದರಂತೆ ತಿಪಟೂರಿನಲ್ಲಿ ಬಂದ್ ಯಶಸ್ವಿಯಾಗಿ ನಡೆಯಿತು.

ಬಂದ್ ನಡೆಯದ ಹಾಗೆ ಕಾಂಗ್ರೆಸ್ ಮತ್ತು ವರ್ತಕರು ನಡೆಸಿದ ಯತ್ನ ವಿಫಲವಾಯಿತು.

ಮಧ್ಯಾಹ್ನ 2 ಘಂಟೆಗೆ ಸಾವಿರಾರು ಜನರ ಭಾರಿ ಪ್ರದರ್ಶನ ನಡೆಯಿತು. ಇದರ ನಾಯಕತ್ವವನ್ನು ಕಾಂ. ಎಚ್. ಸಿ. ಚನ್ನಪ್ಪ, ಕಾಂ. ಬಿ. ಡಿ. ರಾಮಯ್ಯ, ಕಾಂ. ಆರ್. ಎಸ್. ಚನ್ನಬಸವಣ್ಣ, ಕಾಂ. ದಯಾನಂದ, ಕಾಂ. ತಿಮ್ಮೇಗೌಡ, ಎಸ್.ಎಫ್.ಐ. ಕಾರ್ಯಕರ್ತರು ಮತ್ತು ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ವಹಿಸಿದ್ದರು. ಸಂಜೆ 5 ಘಂಟೆಗೆ ಬಹಿರಂಗ ಸಭೆ ನಡೆಯಿತು. ಇದರ ಅಧ್ಯಕ್ಷತೆಯನ್ನು ತಿಪಟೂರು ತಾಲ್ಲೂಕು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟ್ ಸಮಿತಿ ಅಧ್ಯಕ್ಷರಾದ ಶ್ರೀಮಾನ್ ತೋಪೆಗೌಡರವರು ವಹಿಸಿದ್ದರು.

ಈ ಸಭೆಯಲ್ಲಿ ಸಿ. ಪಿ. ಐ. (ಎಂ) ಪರವಾಗಿ ಕಾಂ. ಚೆನ್ನಪ್ಪ ಮತ್ತು ಕಾಂ. ರಾಮಯ್ಯ, ಕಾಂಗ್ರೆಸ್‌ನ ಚೇರಿಯನ್, ಯು ಜಿ ಚತ್ರಪತಿ, ಸಿ. ಪಿ. ಐ. ನ ಶಿವನಂಜಪ್ಪ, ಲೋಕದಳದ ಸಿದ್ಧಲಿಂಗಯ್ಯ, ಬಿ. ಜೆ. ಪಿ. ಯ ಎಸ್. ಮಲ್ಲಿಕಾರ್ಜುನಯ್ಯ, ಶ್ರೀ ಕಾಚೋರಪ್ಪ, ಮೊದಲಾದವರು ಮಾತನಾಡಿದರು.

ನಂತರ ವಿರೋಧ ಪಕ್ಷಗಳ ಸಂಯುಕ್ತ ಹೋರಾಟ ಸಮಿತಿಯು ಚಳುವಳಿಯನ್ನು ಮುಂದುವರಿಸಲು ಸರ್ವಾನುಮತದಿಂದ ತೀರ್ಮಾನಿಸಿತು.

●

ಬಾಗೇಪಲ್ಲಿಯಲ್ಲಿ ರೈತರ ಮೇಲೆ ಸರ್ಕಾರದ ದೌರ್ಜನ್ಯ : 2 ಸಾವು 25 ಜನಕ್ಕೆ ಗಾಯ

ಭೀಕರ ಬರಗಾಲಕ್ಕೆ ಬಲಿಯಾಗಿರುವ ಕೋಲಾರ ಜಿಲ್ಲೆಯ ಎಲ್ಲಾ ಕೂಲಿಗಾರರು, ರೈತರು ಮತ್ತಿತರ ಜನಸಮುದಾಯವೆಲ್ಲಾ ಕುಡಿಯುವ ನೀರಿಗಾಗಿ ಆಕಾಶ ನೋಡುತ್ತಿದ್ದಾರೆ. ಜಿಲ್ಲೆಯ ಕೆರೆ ಕಟ್ಟೆಗಳೆಲ್ಲಾ ಬತ್ತಿಹೋಗಿ ಜಾನುವಾರುಗಳೆಲ್ಲಾ ಪ್ರಾಣ ಬಿಡುವ ಸ್ಥಿತಿ ಬಂದಿದೆ. ಜಿಲ್ಲೆಯ ಭೂಭಾಗದಲ್ಲಿ ತಿನ್ನಲು ಗೆಡ್ಡೆಗೆಣಸುಗಳೂ ಸಿಕ್ಕದೆ ಬಡಜನತೆ ಗುಳೆ ಹೊರಡುತ್ತಿರುವ ವರದಿಗಳೂ ಬರುತ್ತಿವೆ.

ಈ ಬರ್ಬರ ಸ್ಥಿತಿಯನ್ನು ಕಳೆದ 9 ತಿಂಗಳಿನಿಂದಲೂ ಎದುರಿಸುತ್ತಿರುವ ಜಿಲ್ಲೆಯ ಜನತೆ ರಾಷ್ಟ್ರದ ಇತರ ಪ್ರದೇಶಗಳಂತೆ ಬೆಲೆ ಏರಿಕೆಯ ಬಿಸಿಯಲ್ಲಿ ಸುಟ್ಟು ಬೂದಿಯಾಗುತ್ತಿದ್ದಾರೆ.

ಈ ಎಲ್ಲ ಕಷ್ಟಕಾರ್ಪಣ್ಯಗಳನ್ನು ಸರ್ಕಾರದ ಗಮನಕ್ಕೆ ತರಲು, ಮತ್ತು ರಾಜ್ಯದ ಉತ್ತರ ಭಾಗದಲ್ಲಿನ ರೈತ ಚಳುವಳಿಯ ಮೇಲೆ ಕಾಂಗ್ರೆಸ್ ಸರ್ಕಾರ ನಡೆಸಿದ ಘೋರ ಗೋಲಿಬಾರ್ ಖಂಡಿಸಲು ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ರೈತಸಂಘವು ಬಾಗೇಪಲ್ಲಿ ಬಂದ್‌ಗೆ ಆ. 7ರಂದು ಕರೆ ನೀಡಿದ್ದಿತು.

ತಾಲ್ಲೂಕಿನ ಎಲ್ಲಾ ಭಾಗಗಳಿಂದ ಬಂದು ಬಾಗೇಪಲ್ಲಿಯಲ್ಲಿ ನಡೆದ ರೈತರ ಮೆರವಣಿಗೆಯಲ್ಲಿ ಸುಮಾರು ಎರಡು ಸಾವಿರ ರೈತರು ಮತ್ತು ಕೂಲಿಗಾರರು ಭಾಗವಹಿಸಿದ್ದರು.

ಕಾಂಗ್ರೆಸ್ ಪೋಲೀಸರ ಉದ್ದೇಶಿತ ಗೋಲಿಬಾರ್ :

ಪಟ್ಟಣದ ಮುಖ್ಯ ಬೀದಿಗಳಲ್ಲಿ ಶಾಂತಿಯುತವಾಗಿ ಮೆರವಣಿಗೆಯಲ್ಲಿ ತೆರಳುತ್ತಿದ್ದ ನಿರಾಯುಧ ಪ್ರದರ್ಶನಕಾರರ ಮೇಲೆ ಕಾಂಗ್ರೆಸ್ ಸರ್ಕಾರದ ಪೋಲೀಸರು ವಿನಾಕಾರಣ ಲಾಠಿ ಚಾರ್ಜ್, ಅಶ್ರುವಾಯು ಪ್ರಯೋಗ ಮಾಡಿ ಹೊಟ್ಟೆಗಿಲ್ಲದ ಬಡಜನತೆಯಲ್ಲಿ ಸಿಟ್ಟನ್ನು ಮತ್ತಷ್ಟು ಹೆಚ್ಚು ಮಾಡಿದರು. ಪೋಲೀಸರ ಹದ್ದುಮೀರಿದ ಈ ವರ್ತನೆಯಿಂದಾಗಿ ಪ್ರದರ್ಶನಕಾರರು ರಾಕ್ಷಸೀ ರಾವ್ ಸರ್ಕಾರದ ವಿರುದ್ಧ, ಇಂದಿರಾ ಸರ್ಕಾರದ ನೀತಿಗಳ ವಿರುದ್ಧ ಮತ್ತಷ್ಟು ಜೋರಾಗಿ ಘೋಷಣೆ ಕೂಗತೊಡಗಿದರು.

ಸುರಕ್ಷಿತ ಕಾಂಪೌಂಡೊಂದಕ್ಕೆ ಸೇರಿಕೊಂಡ ಕದೀಮ ಕಾಂಗ್ರೆಸ್ ಸರ್ಕಾರದ ಪೋಲೀಸರು ಬೀದಿಯಲ್ಲಿದ್ದ ನಿರಾಯುಧ ಜನತೆಯ ಮೇಲೆ ಗುಂಡಿನ ಧಾಳಿ ಆರಂಭಿಸಿದರು. ಸ್ಥಳದಲ್ಲೇ ಇಬ್ಬರು ನಾಗರೀಕರು ಗುಂಡೂರಾವ್ ಸರ್ಕಾರದ ಗುಂಡಿಗೆ ಬಲಿಯಾದರು! ಶಾಲೆಯಿಂದ ಹಿಂತಿರುಗುತ್ತಲಿದ್ದ ಪುಟ್ಟಪುಟ್ಟ ಮಕ್ಕಳೂ ಸೇರಿದಂತೆ ಒಟ್ಟು 25 ಜನ ಗಾಯಗೊಂಡಿದ್ದು ಅವರಲ್ಲಿ 5 ಜನರ ಸ್ಥಿತಿ ಚಿಂತಾಜನಕವಾಗಿದೆ. ಗಾಯಾಳುಗಳನ್ನು [ಬೆಂಗಳೂರಿನ ವಿವಿಧ ಆಸ್ಪತ್ರೆಗಳಿಗೆ ದಾಖಲು ಮಾಡಲಾಗಿದೆ.

ಜಿಲ್ಲೆಯಲ್ಲಿನ ಭೀಕರ ಬರಗಾಲ, ಬೆಲೆಏರಿಕೆ ಮತ್ತು ರಾಜ್ಯದ ಉತ್ತರ ಭಾಗದಲ್ಲಿ ರೈತರನ್ನು ಕೊಂದ ಕಾಂಗ್ರೆಸ್ ಸರ್ಕಾರದ ದಮನಕಾರಿ ನೀತಿಯು ಬಾಗೇಪಲ್ಲಿಯಲ್ಲಿ ನಡೆದ ಅಹಿತಕಾರಿ ಘಟನೆಗೆ ಕಾರಣವೆಂದೂ, ಶಾಂತ ಪ್ರದರ್ಶಕರ ಮೇಲೆ ಪೋಲೀಸರ ಹದ್ದುಮೀರಿದ ವರ್ತನೆಯೇ ಬಾಗೇಪಲ್ಲಿಯಲ್ಲಿನ ಇಬ್ಬರ ಬಲಿಗೆ ಮತ್ತು 25 ಮಂದಿ ಗಾಯಗೊಳ್ಳುವುದಕ್ಕೆ ಕಾರಣವೆಂದು ರೈತಸಂಘದ ಮುಂದಾಳು ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡ ಎ. ವಿ. ಅಪ್ಪಸ್ವಾಮಿರೆಡ್ಡಿಯವರು ಪತ್ರಕರ್ತರಿಗೆ ತಿಳಿಸಿದರು. ಬಾಗೇಪಲ್ಲಿಯೂ ಸೇರಿದಂತೆ ರಾಜ್ಯದ ಎಲ್ಲಾ ಭಾಗಗಳಲ್ಲಿ ನಡೆದಿರುವ ಗೋಲೀಬಾರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕೆಂದು ರೈತಸಂಘ ಒತ್ತಾಯಿಸಿದೆ. ಪೋಲೀಸರ ಹಿಂಸಾಕಾಂಡಕ್ಕೆ ಬಲಿಯಾದ ಕುಟುಂಬದವರಿಗೆ ಪರಿಹಾರ ಕೊಡಬೇಕೆಂದೂ ಸಹ ರೈತಸಂಘ ಆಗ್ರಹ ಪಡಿಸಿದೆ.

ಹಸಿವಿನ ಅಂಚಿನಲ್ಲಿ ತೊಳಲಾಡುತ್ತಿರುವ ಇಡೀ ಕೋಲಾರ ಜಿಲ್ಲೆಯನ್ನು ಅಭಾವ ಪೀಡಿತ ಪ್ರದೇಶವೆಂದು ಸಾರಿ ಪರಿಹಾರ ಕಾರ್ಯಗಳನ್ನು ಸರ್ಕಾರವು ಕೂಡಲೇ ಕೈಗೆತ್ತಿಕೊಳ್ಳಬೇಕೆಂದು ರೈತ ಸಂಘವು ಪ್ರಬಲ ಒತ್ತಾಯ ಹಾಕಿದೆ.

○

ರೈತರ ಮೇಲಿನ ದಬ್ಬಾಳಿಕೆ ವಿರೋಧಿಸಿ ಬೆಂಗಳೂರು ಕಾರ್ಮಿಕರ ಮೆರವಣಿಗೆ

ರಾಜ್ಯದ ನಾನಾ ಜಿಲ್ಲೆಗಳಲ್ಲಿ ತಮ್ಮ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾರ್ಗ ಹಿಡಿದಿರುವ ರೈತರ ಮತ್ತು ಬೆಲೆಏರಿಕೆ ವಿರುದ್ಧ ಪ್ರತಿಭಟಿಸುತ್ತಿರುವ ನಾಗರೀಕರ ಮೇಲೆ ರಾಜ್ಯದ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ಗೋಲೀಬಾರ್ ಲಾಠಿಚಾರ್ಜ್ ಮುಂತಾದ ದಬ್ಬಾಳಿಕೆಯನ್ನು ವಿರೋಧಿಸಿ ಆ. 10 ರಂದು ಬೆಂಗಳೂರು ನಗರದ ಕಾರ್ಮಿಕರು ತಮ್ಮ ಭಾರಿ ಪ್ರತಿಭಟನೆ ವ್ಯಕ್ತಪಡಿಸಿದರು.

ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಕಾರ್ಮಿಕ ಸಂಘಟನೆ ವ್ಯವಸ್ಥೆ ಮಾಡಿದ್ದ 'ಕಾರ್ಮಿಕ-ರೈತ ಸೌಹಾರ್ದ ದಿನಾಚರಣೆ' ಮತ್ತು ಪ್ರತಿಭಟನಾ ಮೆರವಣಿಗೆಯಲ್ಲಿ ಸುಮಾರು ಎರಡು ಸಾವಿರಕ್ಕೂ ಅಧಿಕ ಕಾರ್ಮಿಕರು ಭಾಗವಹಿಸಿದ್ದರು.

ಬೆಂಗಳೂರಿನ ಚಿಕ್ಕ ಲಾಲ್‌ಬಾಗಿನಿಂದ ಆರಂಭವಾದ ಮೆರವಣಿಗೆಯು ನಗರದ ನಾನಾ ಬೀದಿಗಳಲ್ಲಿ ಹಾದು ರಾಜಭವನಕ್ಕೆ ತೆರಳಿತು. ಬೆಲೆಏರಿಕೆ ವಿರುದ್ಧದ ಭಿತ್ತಿಪತ್ರಗಳನ್ನು ಹಿಡಿದಿದ್ದ ಕಾರ್ಮಿಕರು, ರೈತರ ಮೇಲಿನ ಸರ್ಕಾರದ ದಬ್ಬಾಳಿಕೆ ನೀತಿಯ ವಿರುದ್ಧ ಘೋಷಣೆ ಕೂಗುತ್ತಿದ್ದರು.

ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್, ಕಾರ್ಯದರ್ಶಿ ವಿ. ಜೆ. ಕೆ. ನಾಯರ್, ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಮುಖಂಡರಾದ ಆರ್. ಶ್ರೀನಿವಾಸ್, ಟಿ. ಎಸ್. ಅನಂತರಾವ್ ಮತ್ತು ನಗರಕ್ಕೆ ಆಗಮಿಸಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಎನ್. ಕೆ. ಉಪಾಧ್ಯಾಯ ಅವರನ್ನೊಳಗೊಂಡ ನಿಯೋಗವೊಂದು ರಾಜ್ಯಪಾಲರನ್ನು ಭೇಟಿಯಾಗಿ ಬೆಲೆಏರಿಕೆ ತಡೆಗಟ್ಟಬೇಕು, ಜೀವನಾವಶ್ಯಕ ವಸ್ತುಗಳ ಸಗಟುವ್ಯಾಪಾರವನ್ನು ರಾಷ್ಟ್ರೀಕರಣಗೊಳಿಸಬೇಕು, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಅಗತ್ಯ ವಸ್ತುಗಳನ್ನು ಎಲ್ಲ ಜನತೆಗೂ ದೊರಕಿಸಬೇಕೆಂಬ ಬೇಡಿಕೆಗಳನ್ನುಳ್ಳ ಮನವಿ ಪತ್ರ ಅರ್ಪಿಸಿದರು.

ಕಾರ್ಮಿಕ ಮುಂದಾಳುಗಳೊಡನೆ ಮಾತನಾಡಿದ ರಾಜ್ಯಪಾಲರು ಬೇಡಿಕೆಯ ಬಗ್ಗೆ ಗಮನಹರಿಸುವುದಾಗಿ ಭರವಸೆ ಇತ್ತರು. ಬೇಡಿಕೆಗಳನ್ನು ಈಡೇರಿಸುವುದರಲ್ಲಿ ಸರಕಾರವು ವಿಫಲವಾದರೆ, ಮತ್ತು ಪೋಲೀಸ್ ದೌರ್ಜನ್ಯವನ್ನು ನಿಲ್ಲಿಸದಿದ್ದರೆ ರಾಜ್ಯದಾದ್ಯಂತ ಕಾರ್ಮಿಕರು ಮತ್ತು ರೈತರು ಸಖ್ಯತೆಯಿಂದ ಉಗ್ರಚಳುವಳಿಯನ್ನು ನಡೆಸಬೇಕಾಗುವುದೆಂದು ಸಿ. ಐ. ಟಿ. ಯು. ಸರಕಾರವನ್ನು ಎಚ್ಚರಿಸಿದೆ.

●

ಬೆಲೆ ನಿಯಂತ್ರಣಕ್ಕೆ ಶಿಡ್ಲಘಟ್ಟ ಶಾಖೆ ಒತ್ತಾಯ

ದಿನಬಳಕೆ ವಸ್ತುಗಳ ಬೆಲೆಗಳು ದಿನೇದಿನೇ ಏರುತ್ತಿವೆ. ಆದ್ದರಿಂದ ಜಿಲ್ಲೆ ಹಾಗೂ ಸಬ್‌ಡಿವಿಜನ್ ಅಧಿಕಾರಿಗಳು ವ್ಯಾಪಾರಿಗಳಿಗೆ ಕರೆ ನೀಡಿ ಬೆಲೆಗಳನ್ನು ತಾತ್ಕಾಲಿಕವಾಗಿಯಾದರೂ ನಿಯಂತ್ರಿಸುವುದು ಸೂಕ್ತವಾಗಿದೆ. ಶಿಡ್ಲಘಟ್ಟದ ವ್ಯಾಪಾರಿಗಳಿಗೆ ಈ ರೀತಿ ಕರೆ ನೀಡಿ ಬೆಲೆಗಳನ್ನು ಇಳಿಸಬೇಕೆಂದು ತಹಸೀಲ್ದಾರರಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿಡ್ಲಘಟ್ಟ ಶಾಖೆ ಒತ್ತಾಯಿಸಿದೆ.

○

ಪ್ರಜಾಪ್ರಭುತ್ವ ಹೋರಾಟಕ್ಕೆ ಮುನ್ನುಗ್ಗಲು ರೈತರಿಗೆ ಕರೆ

(1ನೇ ಪುಟದಿಂದ)

ಮಾಡಿದರೆ ಈ ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಸೋಲಿಸಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟಿದೆ. ಅದೇ ಸಮಯದಲ್ಲಿ ಚೈನಾದ ನಿಲುಮೆ ಮಾತ್ರ ತೀವ್ರ ಖಂಡನೀಯ.

ಪೆಲೆಸ್ಟೈನ್ ಪ್ರಶ್ನೆಯು ಹಲವು ದಶಕಗಳಿಂದ ಜಗತ್ತಿನ ಕ್ಲಿಷ್ಟ ಪ್ರಶ್ನೆಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿರುವಾಗ, ಇದೀಗ ಇಸ್ರೇಲ್ ರಾಜ್ಯವು ಜೆರುಸೆಲೆಂನ್ನು ತನ್ನ ಪ್ರಧಾನ ಪಟ್ಟಣವನ್ನಾಗಿ ಮಾರ್ಪಡಿಸಲು ಹೊರಟಿರುವುದು ಅದನ್ನು ಇನ್ನಷ್ಟು ತೀವ್ರಗೊಳಿಸಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನು ಅಫ್‌ಘಾನಿಸ್ತಾನದ ವಿಷಯದಲ್ಲಿ ಬೆಂಬಲಿಸುತ್ತಿರುವ ಅರಬ್ ರಾಷ್ಟ್ರಗಳೂ, ಇತರ ಎಲ್ಲಾ ಸಾಮ್ರಾಜ್ಯಶಾಹಿ ರಾಷ್ಟ್ರಗಳೂ ಈ ವಿಷಯದಲ್ಲಿ ಅದನ್ನು ವಿರೋಧಿಸುತ್ತವೆ. ಚೈನಾ ಕೂಡಾ ಈ ವಿಷಯದಲ್ಲಿ ಸೋವಿಯತ್ ಜೊತೆಗೂಡಿ ಅರಬರ ಹಿತ ಮತ್ತು ಪೆಲೆಸ್ಟೈನ್‌ರಾಷ್ಟ್ರದ ಹಿತ ರಕ್ಷಣೆ ಕಾರ್ಯದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನೂ ಇಸ್ರೇಲನ್ನೂ ವಿರೋಧಿಸಬೇಕಾಗಿದೆ.

ಜಗತ್ತಿನ ಈ ಬೆಳವಣಿಗೆಗಳು ಹೇಗೆ ಲೋಕದ ದಿಗಂತದಲ್ಲಿ ಎಲ್ಲಾ ಪುರೋಗಾಮಿ ಶಕ್ತಿಗಳೂ, ಸಮಾಜವಾದಿ ಶಕ್ತಿಗಳೂ ಸಾಮ್ರಾಜ್ಯಶಾಹಿ ಪ್ರತಿಗಾಮಿ ಶಕ್ತಿಗಳಿಗಿಂತ ಅತೀ ಶಕ್ತಿ ಪ್ರದರ್ಶನ ಮಾಡುವ ಸಾಧ್ಯತೆಯನ್ನು ತೋರಿಸುತ್ತಿವೆ.

ಅದೇ ರೀತಿ ನಮ್ಮ ದೇಶದಲ್ಲೂ ಇಂದು ಸರ್ವಾಧಿಕಾರಿ ಶಕ್ತಿಗಳಿಗೂ ಪುರೋಗಾಮಿ ಪ್ರಜಾಪ್ರಭುತ್ವ ಶಕ್ತಿಗಳಿಗೂ ನಡುವಿನ ಜಂಜಾಟ ಮುಂದುವರಿಯುತ್ತಿದ್ದು ಒಂದು ಸಲ ಸರ್ವಾಧಿಕಾರಿ ಶಕ್ತಿಗಳೂ, ಇನ್ನೊಮ್ಮೆ ಪ್ರಜಾಪ್ರಭುತ್ವ ಶಕ್ತಿಗಳೂ ಮೇಲ್ಮುಖವಾಗುತ್ತಿರುವುದನ್ನು ಕಾಣಬಹುದು. ಚುನಾವಣೆಗಳಲ್ಲಿ ಇಂದಿರಾಗಾಂಧಿ ಪಕ್ಷವು ಅದು ಎಣಿಸಿದ್ದಕ್ಕಿಂತಲೂ ಅಧಿಕ ಶಕ್ತಿಯಿಂದ ಗೆದ್ದು ದಿಲ್ಲಿಯಲ್ಲೂ ಹಲವಾರು ರಾಜ್ಯಗಳಲ್ಲೂ ಅಧಿಕಾರಾರೂಢವಾಗಿದೆ. ಇದರಿಂದ ಎಲ್ಲಾ ಪ್ರತಿಗಾಮಿ ಶಕ್ತಿಗಳಿಗೆ ಒಂದು ಹೊಸ ಸ್ಫೂರ್ತಿ ಸಿಕ್ಕಿದಂತಾಗಿದೆ. ಎಲ್ಲೆಡೆಗಳಲ್ಲೂ ಸರ್ವಾಧಿಕಾರಿ ಪ್ರವೃತ್ತಿಗಳು ಎದ್ದು ಬರುವುದನ್ನು ನಾವು ಕಾಣುತ್ತಿದ್ದೇವೆ. ಅದೇ ವೇಳೆ ಪ. ಬಂಗಾಳ, ಕೇರಳ ಮತ್ತು ತ್ರಿಪುರಾಗಳಲ್ಲಿ ಕಾಂಗ್ರೆಸ್(ಐ)ಗೆ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ಒಕ್ಕೂಟವು ತೀವ್ರ ಸೋಲನ್ನುಂಟುಮಾಡಿ, ದೇಶದಲ್ಲೇ ಸರ್ವಾಧಿಕಾರಿ ಶಕ್ತಿಗಳನ್ನು ತಡೆಗಟ್ಟಿ ದೇಶವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಲು ಇರುವ ಒಂದೇ ದಾರಿ ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಎಂದು ಸ್ಪಷ್ಟಪಡಿಸಿದೆ. 1977ರಲ್ಲಿ ಈ ಸರ್ವಾಧಿಕಾರಿ ಶಕ್ತಿಗಳ ಮುನ್ನಡೆಯನ್ನು ತಡೆಗಟ್ಟುವ ದಾರಿ ಬಂಡವಾಳಶಾಹಿ ಭೂಮಾಲಕ ವರ್ಗಗಳದ್ದೇ ಪಕ್ಷವಾದ ಜನತಾಪಕ್ಷದಿಂದ ತಂದಿದ್ದ ಅಭಿಪ್ರಾಯವು ಇದೀಗ ಸಂಪೂರ್ಣವಾಗಿ ಮುರಿದುಬಿದ್ದಿದೆ.

ಈ ಹೋರಾಟವು ಪ್ರಜಾಪ್ರಭುತ್ವ ಪ್ರಗತಿಪರ ಶಕ್ತಿಗಳಿಗೆ ಜಯಪ್ರದವಾಗಬೇಕಾದರೆ, ದೇಶದ ರೈತರು ದೊಡ್ಡ ಪಾತ್ರವನ್ನು ವಹಿಸಬೇಕಾಗಿದೆ. ರೈತರು ಈ ಪಾತ್ರವನ್ನು ವಹಿಸುವಂತೆ ಮಾಡುವುದೇ ನಮ್ಮ ರೈತಸಂಘದ ಮುಂದಿನ ಕರ್ತವ್ಯ.

"ಧೀರ ಹೋರಾಟವನ್ನು ನಡೆಸುತ್ತಲಿರುವ ಕರ್ನಾಟಕದ ರೈತರಿಗೆ ಅಭಿನಂದನೆ ಇತ್ತು, ರೈತ ಚಳುವಳಿಯನ್ನು ಬೆಳೆಸುವುದಕ್ಕೆ, ಬಡರೈತ ಮತ್ತು ಮಧ್ಯ ರೈತ ಹಾಗೂ ಕೃಷಿಕೂಲಿಗಾರರ ಬಲಿಷ್ಟ ಸಂಘಟನೆ ಮತ್ತು ಚಳುವಳಿಗಳ ಮೂಲಕ ಸಮಗ್ರ ಬದಲಾವಣೆಯತ್ತ ಮುನ್ನಡೆಯಲು ಪ್ರಾಂತ ರೈತ ಸಂಘದ ರಾಜ್ಯ ಮಂಡಲಿ ಸಭೆಯನ್ನು ಉದ್ದೇಶಿಸಿ ಅಖಿಲಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಕಾಂ. ಚಾತುಣ್ಣಿ ಮಾಸ್ತರ್ ಕರೆ ಇತ್ತರು.

○

ರೈತ, ಕೃಷಿ ಕೂಲಿಗಾರರ ಸಮಸ್ಯೆಗಳ ಬಗ್ಗೆ ರಾಜ್ಯದಾದ್ಯಂತ ಹೋರಾಟ

(1ನೇ ಪುಟದಿಂದ)

ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಶ್ನೆ, ಬೆಲೆಏರಿಕೆಯಂತಹ ಪ್ರಶ್ನೆಗಳನ್ನು ತೆಗೆದುಕೊಂಡು ರಾಜ್ಯದಾದ್ಯಂತ ಹೋರಾಟವನ್ನು ನಡೆಸಲು ರಾಜ್ಯಮಂಡಲಿಯು ನಿರ್ಣಯಿಸಿದೆ. ಸೆಪ್ಟೆಂಬರ ಮಧ್ಯದಿಂದ ಅಕ್ಟೋಬರ್ ಮಧ್ಯದ ತನಕ ತಾಲ್ಲೂಕು ಮಟ್ಟಗಳಲ್ಲೂ, ಅಕ್ಟೋಬರ್ ಮಧ್ಯದಿಂದ ನವೆಂಬರ ಮಧ್ಯದ ತನಕ ಜಿಲ್ಲಾ ಮಟ್ಟದಲ್ಲೂ, ನವೆಂಬರ್ ಮಧ್ಯದಿಂದ ಡಿಸೆಂಬರ್ ಮಧ್ಯದ ತನಕ ರಾಜ್ಯಮಟ್ಟದಲ್ಲೂ ಹೋರಾಟ ಕಾರ್ಯಕ್ರಮ ಹಾಕಲು ಸಭೆಯು ನಿರ್ಣಯಿಸಿದೆ. ಇದರ ಅಂಗವಾಗಿ ಡಿಸೆಂಬರ್ ಕೊನೆಯೊಳಗೆ ಬೆಂಗಳೂರಿನಲ್ಲಿ ರೈತ, ಕೃಷಿಕೂಲಿಗಾರ ಮತ್ತು ಕಾರ್ಮಿಕರ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಲು ರಾಜ್ಯಮಂಡಲಿಯು ತೀರ್ಮಾನಿಸಿದೆ. ಉಳಿದ ರೈತಸಂಘಟನೆಗಳ ಜೊತೆಗೂಡಿ ಹೋರಾಡಲು ಸಭೆಯು ಕರೆ ಇತ್ತಿದೆ.

ಗಿಲರ ಸಾರ್ವತ್ರಿಕ ಮುಷ್ಕರ:

ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ಕರಾಳ ಶಾಸನದ ವಿರುದ್ಧ ಕಾರ್ಮಿಕ ಸಂಘಟನೆಗಳ ಜಂಟೀಕ್ರಿಯಾ ಸಮಿತಿಯು ನಡೆಸಿದ ರಾಜ್ಯ ಮಟ್ಟದ ಸಮಾವೇಶವು ಆಗಸ್ಟ್ 18 ರಂದು ಸಾರ್ವತ್ರಿಕ ಮುಷ್ಕರ ನಡೆಸಲು ಕರೆ ಇತ್ತಿರುವುದನ್ನು ಸಭೆಯು ಸಂಪೂರ್ಣ ಬೆಂಬಲಿಸಿ, ಕರಾಳ ಶಾಸನವನ್ನು ಕೈಬಿಡುವಂತೆ ಸರಕಾರವನ್ನು ಒತ್ತಾಯಿಸಿದೆ.

ಕ್ಷಾಮಪೀಡಿತ ಜಿಲ್ಲೆಗಳು :

ಕೋಲಾರ ಜಿಲ್ಲೆ, ಬಿಜಾಪುರ ಜಿಲ್ಲೆ, ತುಮಕೂರು ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಮೈಸೂರು ಜಿಲ್ಲೆಗಳಲ್ಲಿ ಮಳೆ ಇಲ್ಲದೆ ಬರಗಾಲ ಬಂದಿದೆ. ರೈತರು ತತ್ತರಿಸುತ್ತಲಿದ್ದಾರೆ, ಕೃಷಿಕೂಲಿಗಾರರು ಉದ್ಯೋಗವಿಲ್ಲದೆ ಸಾಯುವಂತಾಗಿದೆ. ಈ ಜಿಲ್ಲೆಗಳನ್ನು ಕ್ಷಾಮ ಪೀಡಿತ ಜಿಲ್ಲೆಗಳೆಂದು ಸಾರಿ, ತಕ್ಷಣ ಪರಿಹಾರ ಕಾರ್ಯಕ್ರಮ ಹಾಕುವಂತೆ ಸರಕಾರವನ್ನು ಸಭೆಯು ಒತ್ತಾಯಿಸಿದೆ.

ವರಾಹಿ ಪ್ರಾಜೆಕ್ಟ್ :

ಪಶ್ಚಿಮ ಘಟ್ಟದ ಬದಿಯ ತೀರ್ಥಹಳ್ಳಿ, ಹೊಸ ನಗರ ತಾಲ್ಲೂಕುಗಳಲ್ಲಿ ವರಾಹಿ ಯೋಜನೆಯಿಂದ ಸಾವಿರಾರು ರೈತರು, ಅದರಲ್ಲೂ ಸಣ್ಣಹಿಡುವಳಿ ರೈತರು ಭೂಮಿ ಕಳೆದುಕೊಂಡು ಕಷ್ಟನಷ್ಟಕ್ಕೊಳಗಾಗಿರುವರು. ಇವರಿಗೆ ಸರಿಯಾದ ಪುನರ್ವಸತಿ ವ್ಯವಸ್ಥೆ, ಬದಲಿ ಭೂಮಿ, ಸರಿಯಾದ ಪರಿಹಾರವನ್ನು ಒದಗಿಸಲು ಸರಕಾರವನ್ನು ಒತ್ತಾಯಿಸಿದ ಸಭೆಯು, ನ್ಯಾಯಕೊಡದಿದ್ದಲ್ಲಿ ಉಗ್ರ ಹೋರಾಟ ನಡೆಸಬೇಕಾಗುವುದೆಂದು ಎಚ್ಚರಿಸಿದೆ.

ಇತರ ಬೇಡಿಕೆಗಳು :

ಬೆಂಗಳೂರಿನ ತಾತಗುಣಿ ಎಸ್ಟೇಟಿನ ದಲಿತ ಕಾರ್ಮಿಕರ ಹೋರಾಟಕ್ಕೆ ಸಂಪೂರ್ಣ ಬೆಂಬಲವಿತ್ತ ಸಭೆಯು, ಎಸ್ಟೇಟ್ ಮಾಲಕರು ಇನ್ನೂ ಕೆಲಸಗಾರರನ್ನು ಕೆಲಸಕ್ಕೆ ಸೇರಿಸದಿರುವುದನ್ನು ಖಂಡಿಸಿದೆ. ಮಾಲಕ ರೋರಿಚ್ ಮೇಲೆ ಕ್ರಮ ತೆಗೆದುಕೊಂಡು, ಕಾರ್ಮಿಕರಿಗೆ ನ್ಯಾಯ ಒದಗಿಸಲು ಒತ್ತಾಯಿಸಲಾಗಿದೆ. ರಾಜ್ಯದಲ್ಲಿ ನಡೆಯುತ್ತಿರುವ ದಲಿತರ ಹೋರಾಟಗಳಿಗೆ ಸಂಪೂರ್ಣ ಬೆಂಬಲ ಸೂಚಿಸಿರುವ ರಾಜ್ಯ ಮಂಡಲಿಯು, ಹುಣಸೆಕೋಟೆ ಶೇಷಗಿರಿಯಪ್ಪನಂತವರನ್ನು ಹತ್ಯೆ ಮಾಡಿದವರ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳದಿದ್ದನ್ನು ಖಂಡಿಸಿದೆ.

ಯು. ಜಿ. ನೊಣದ ಹಾವಳಿಯಿಂದ ರೇಷ್ಮೆ ಬೆಳೆಗಾರರು ಅಪಾರ ನಷ್ಟ ಅನುಭವಿಸುತ್ತಲಿರುವರು. ಇವರಿಗೆ ಸಹಾಯ, ಪರಿಹಾರಗಳನ್ನು ಒದಗಿಸಲು ಸರಕಾರವನ್ನು ಒತ್ತಾಯಿಸಲಾಗಿದೆ. ಕೊಡಗು ಜಿಲ್ಲೆ, ದ. ಕ. ಜಿಲ್ಲೆ ಹಾಗೂ ಇನ್ನಿತರೆಡೆಗಳಲ್ಲಿ ಕಿತ್ತಳೆ, ಏಲಕ್ಕಿ, ಕರಿ ಮೆಣಸು ಮತ್ತು ಕೊಕ್ಕೊ ಬೆಳೆಸುತ್ತಲಿದ್ದು ಈ ಬೆಳೆಗಳಿಗೆ ಸರಿಯಾದ ಬೆಲೆ ದೊರೆಯದೆ ರೈತರೂ ಕಷ್ಟನಷ್ಟಕ್ಕೀಡಾಗಿದ್ದಾರೆ. ಕಾಫಿ ಬೋರ್ಡಿನಂತೆ ಇವೆಲ್ಲವುಗಳಿಗೂ ಪ್ರತ್ಯೇಕ ಬೋರ್ಡುಗಳನ್ನು ರಚಿಸಬೇಕೆಂದೂ ಮಂಡಳಿಯು ಸರಕಾರವನ್ನು ಒತ್ತಾಯಿಸಿದೆ.

●

ಬೆಳ್ತಂಗಡಿಯಲ್ಲಿ ಮತ ಪ್ರದರ್ಶನ

ದ.ಕ ಜಿಲ್ಲಾ ಬೆಳ್ತಂಗಡಿ ತಾಲ್ಲೂಕಿನ ವಿವಿಧ ಗ್ರಾಮಗಳ ನೂರಾರು ರೈತರು ಬೆಲೆಯೇರಿಕೆಗೆ ವಿರುದ್ಧವಾಗಿ, ಭೂನ್ಯಾಯ ಮಂಡಳಿಗಳ ಭ್ರಷ್ಟಾಚಾರ, ಮಂದಗಮನಗಳಿಗೆ ಇದಿರಾಗಿ, ಸಾಲರದ್ದತಿಗಾಗಿ, ದರಖಾಸ್ತು ಭೂಮಿಗಳ ಶೀಘ್ರವಿತರಣೆಗಾಗಿ ಇಂದು ತಾಲೂಕ್ ತಹಸೀಲದಾರರ ಕಚೇರಿಯ ಮುಂದೆ ಮತಪ್ರದರ್ಶನ ನಡೆಸಿದರು. ರೈತರ ಶಿಷ್ಟಮಂಡಳಿಯೊಂದು ತನ್ನ ಬೇಡಿಕೆಗಳನ್ನು ತುರ್ತಾಗಿ ಈಡೇರಿಸುವಂತೆ ಮನವಿಯೊಂದನ್ನು ಅರ್ಪಿಸಿತು, ರೈತಸಂಘದ ಕಾರ್ಯದರ್ಶಿ ಕಾಂ. ಯಳಚಿತ್ತಾಯರು ಸದ್ಯ ಕರ್ನಾಟಕ ರಾಜ್ಯದ ಎಲ್ಲೆಡೆಯೂ ದಂಗೆಯೆದ್ದಿರುವ ರೈತ ಮಜೂರರ ಪರಿಸ್ಥಿತಿಯ ಬಗ್ಗೆ ಮಾತಾಡುತ್ತಾ ಜನತೆಯನ್ನು ಸವಿಯಾದ ಮಾತುಗಳಿಂದ, ಮಾಮೂಲಾದ ಜೊಂಡು ಆಶ್ವಾಸನೆಗಳಿಂದ ಸುಮ್ಮಗಿರಿಸುವ, ಗುಂಡು ಲಾಠಿಗಳಿಂದ ಬೆದರಿಸುವ ಕಾಲ ಮುಗಿದು ಹೋಯಿತೆಂದೂ, ನಾವು ತಕ್ಷಣ ತೀವ್ರ ಚಳವಳಿಗೆ ಸಿದ್ಧರಾಗಬೇಕೆಂದೂ ನುಡಿದರು! ಎಂದಿನಂತೇ ರೈತರು ಮಜೂರರು ಘೋಷಣೆ ಗಲಿಬಿಲಿಗಳಿಲ್ಲದೇ ಗುಂಪು ಗುಂಪಾಗಿ ಒಮ್ಮಿಂದೊಮ್ಮೆಯೇ ತಾಲ್ಲೂಕು ಕಚೇರಿಯಲ್ಲೆಲ್ಲಾ ಕಾಣಿಸಿಕೊಂಡು ಎಲ್ಲರನ್ನೂ ಬೆರಗುಗೊಳಿಸಿದರು. ತಾಲೂಕು ರೈತಸಂಘವು ತಮ್ಮ ಬೇಡಿಕೆಗಳಿಗಾಗಿ ಪುನಃ ತಾ. 18ರಂದು ಬೃಹತ್ ಮೆರವಣಿಗೆ, ಸಭೆಗಳನ್ನು ನಡೆಸಲಿರುವುದಾಗಿಯೂ, ಆ ಬಳಿಕವೂ ಪರಿಸ್ಥಿತಿಯು ಸುಧಾರಿಸದೇ ಹೋದಲ್ಲಿ ಹಂತಹಂತದ ತೀವ್ರ ಚಳವಳಿಗಳನ್ನು ಸಂಘಟಿಸಲೂ ನಿರ್ಣಯಿಸಿದೆ.

●

'ಸ್ಟೂಡೆಂಟ್ಸ್ ಸ್ಟ್ರಗಲ್'ಗೆ ಚಂದಾದಾರರಾಗಿರಿ

ಎಸ್. ಎಫ್. ಐ. ಕೇಂದ್ರ ಸಮಿತಿಯು ಇನ್ನು ಕೆಲವೇ ದಿನಗಳಲ್ಲಿ ಬಿಡುಗಡೆ ಮಾಡಲಿರುವ 'ಸ್ಟೂಡೆಂಟ್ಸ್ ಸ್ಟ್ರಗಲ್' ಪತ್ರಿಕೆಗೆ ಬೇಗ ಚಂದಾದಾರರಾಗಿರಿ. ವಾರ್ಷಿಕ ಚಂದಾ : ಆರು ರೂಪಾಯಿ. ಅರ್ಧವಾರ್ಷಿಕ ಚಂದಾ : ಮೂರು ರೂಪಾಯಿ. ಚಂದಾಹಣವನ್ನು ಸಂಪಾದಕರು, 'ಸ್ಟೂಡೆಂಟ್ಸ್ ಸ್ಟ್ರಗಲ್', 20, ಜನಪಥ್, ನವದೆಹಲಿ 110001-ಇಲ್ಲಿಗೆ ಮನಿಯಾರ್ಡರ್ ಮಾಡಿರಿ.

●

ರಾಷ್ಟ್ರೀಯ ಐಕ್ಯತಾ ದಿನಾಚರಣೆ ಮುಂದೂಡಿಕೆ

ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಕೇಂದ್ರ ಸಮಿತಿಯು ಆಗಸ್ಟ್ 21ನೇ ದಿನಾಂಕವನ್ನು 'ಏಕತಾ ದಿವಸ'ವನ್ನಾಗಿ ಆಚರಿಸಲು ಕರೆ ನೀಡಿರುವುದರಿಂದ ಮತ್ತು ರಾಜ್ಯದ ನಾನಾ ಕಾಲೇಜುಗಳ ವಿದ್ಯಾರ್ಥಿ ಸಂಘಗಳ ಚುನಾವಣೆಗಳು ಇನ್ನೂ ಮುಗಿದಿಲ್ಲವಾದ್ದರಿಂದ ಮತ್ತು ಬೆಲೆಏರಿಕೆ ವಿರುದ್ಧ ಪ್ರತಿಭಟನೆಯ ಪ್ರಯುಕ್ತ ಶಾಲಾಕಾಲೇಜುಗಳು ಇದುವರೆಗೆ ಮುಚ್ಚಲ್ಪಟ್ಟಿದ್ದರಿಂದ, ಎಸ್. ಎಫ್. ಐ., ಎ. ಐ. ಎಸ್. ಎಫ್., ಡಿ. ವೈ. ಒ. ಮತ್ತು ಎ. ಐ. ವೈ. ಎಫ್.ಗಳು ಐಕ್ಯವಾಗಿ ಆಗಸ್ಟ್ 15ರಂದು ನಡೆಸಲು ಉದ್ದೇಶಿಸಿದ್ದ 'ರಾಷ್ಟ್ರೀಯ ಐಕ್ಯತಾ ದಿನಾಚರಣೆ' ಕಾರ್ಯಕ್ರಮವನ್ನು ಆಗಸ್ಟ್ 21ಕ್ಕೆ ಮುಂದೂಡಲಾಗಿದೆ.

○

ಸಂಪಾದಕೀಯ

(1ನೇ ಪುಟದಿಂದ)

ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಟ್ಟುಸೇರಿಸಿ ಜನತೆಯ ಹೋರಾಟವನ್ನು ಕಾರ್ಯಕ್ರಮದ ಆಧಾರದಲ್ಲಿ ನಡೆಸಿಕೊಂಡು ಹೋದರೇನೇ ಕಾಂಗ್ರೆಗೆ ಒಂದು ಬದಲಿಯನ್ನು ಕೊಡುವುದು ಮತ್ತು ಜನತೆಯ ಸಮಸ್ಯೆಗೆ ಪರಿಹಾರ ಸಾಧ್ಯ ಎಂಬುದು ನಮ್ಮ ಅಭಿಮತ. ಆದರೆ ರಾಜ್ಯದ ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಹಲವಾರು ವಿರೋಧ ಪಕ್ಷಗಳ ಅಸ್ತಿತ್ವವೇ ಹೋಗುವಂತಿರುವಾಗ, ವಿರೋಧ ಪಕ್ಷಗಳು ಒಂದಾಗಿ ಜನತೆಯ ಹೋರಾಟಕ್ಕೆ ಮುಖಂಡತ್ವವನ್ನೀಯುವುದರಲ್ಲಿ ವಿಫಲರಾಗಿರುವಾಗ ಎಡ ಪಕ್ಷಗಳ ಐಕ್ಯತೆಯಿಂದ ಮಾತ್ರವೇ ಸರಿಯಾದ ದಾರಿ ತೋರಿಸುವುದು ಸಾಧ್ಯ. ರಾಜ್ಯದಲ್ಲಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಮಿತ್ರಿತರ ಎಡಶಕ್ತಿಗಳು ಕೂಡಲೇ ಒಂದಾಗಿ, ಮಾತುಕತೆ ನಡೆಸಿ, ಗ್ರಾಮೀಣ ಜನತೆಯ ಸಮಸ್ಯೆ, ಬೆಲೆಏರಿಕೆ ಸಮಸ್ಯೆ, ನಿರುದ್ಯೋಗ ಸಮಸ್ಯೆ, ಸರಕಾರದ ಕಾರ್ಮಿಕ ವಿರೋಧಿ ನೀತಿ ಮತ್ತು ಪೋಲೀಸ್ ದೌರ್ಜನ್ಯಗಳಂತಹವುಗಳ ವಿರುದ್ಧ ಜಂಟೀ ಕಾರ್ಯಕ್ರಮ, ಚಳುವಳಿಗಳನ್ನು ರೂಪಿಸಬೇಕು. ಜನತೆಯ ಹೋರಾಟದ ಆಧಾರದಲ್ಲಿ ಎಡಶಕ್ತಿಗಳು ಒಂದಾಗಿ ಮುನ್ನಡೆಯುತ್ತಿದ್ದಂತೆಯೇ ಇತರ ಪ್ರಜಾಪ್ರಭುತ್ವ ಶಕ್ತಿಗಳೂ ಒಂದು ಸೇರಿ ವಿಶಾಲ ತಳಹದಿಯ ಎಡ ಪ್ರಜಾಪ್ರಭುತ್ವ ಬದಲಿ ಬೆಳೆದುಬರುವುದು ಸಾಧ್ಯ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT